# ನಗರಸಭಾ ಕಾರ್ಯಾಲಯ, ಮಂಡ್ಯ.

ಸಂಖ್ಯೆ:ನಸಮಂ/ಸಭೆ/2/2008–09. ದಿನಾಂಕ:19–7–2008.

## <u>ಸಾಮಾನ್ಯ ಅಧಿವೇಶನ</u>

ದಿನಾಂಕ:19–7–2008ರಂದು ಬೆಳಿಗ್ಗೆ 10–30 ಗಂಟೆಗೆ ಸರಿಯಾಗಿ ಮಂಡ್ಯ ನಗರಸಭಾ ಕಾರ್ಯಾಲಯದ ಶ್ರೀ.ಧರಣಪ್ಪ ಸಭಾಂಗಣದಲ್ಲಿ ಮಾನ್ಯ ನಗರಸಭಾಧ್ಯಕ್ಷರ ಅಧ್ಯಕ್ಷತೆಯಲ್ಲಿ ನಡೆದ ಸಾಮಾನ್ಯ ಅಧಿವೇಶನದ ಸಭೆ ನಡವಳಿಕೆಗಳು.

ಹಾಜರಿ 32+1 ಗೈರು ಹಾಜರಿ: 2 ಖಾಲಿ: 1 ಒಟ್ಟು: 35

**<u>ವಿಷಯ:1:–</u>** ಹಿಂದಿನ ಸಭೆ ನಡವಳಿಕೆಗಳನ್ನು ಓದಿ ರೆಕಾರ್ಡು ಮಾಡುವ ವಿಚಾರ.

**<u>ತೀರ್ಮಾನ:1:–</u>** ಸಭೆ ಪ್ರಾರಂಭದಲ್ಲಿ ಸದಸ್ಯರುಗಳಾದ ಶ್ರೀ.ಎಂ.ಜೆ.ಚಿಕ್ಕಣ್ಣ, ಶ್ರೀ.ಎಂ.ಎಲ್.ಮಂಜುನಾಥ್ ಮತ್ತು ಶ್ರೀ.ಟಿ.ಎನ್. ಶಂಕರೇಗೌಡ ರವರುಗಳು ಮಾತನಾಡಿ ಸೈಟ್ ನಂಬರ್:52 ಎಂದು ಅಕ್ರಮ ಖಾತೆ ಮಾಡಿರುವ ಬಗ್ಗೆ ಪತ್ರಿಕೆಯಲ್ಲಿ ಪ್ರಕಟಗೊಂಡಿರುವ ಬಗ್ಗೆ ಮಾಹಿತಿ ನೀಡುವಂತೆ ಕೋರಿದರು.

ಮಾನ್ಯ ಶಾಸಕರು ಮತ್ತು ಅಧ್ಯಕ್ಷರು ಮಾತನಾಡಿ ಶ್ರೀಮತಿ:ಶಿವಲಿಂಗಮ್ಮರವರ ಹೆಸರಿಗೆ ಖಾತೆ ಮಾಡಿರುವುದನ್ನು ರದ್ದುಪಡಿಸಲು ಹಾಗೂ ಈ ಬಗ್ಗೆ ಕೂಲಂಕುಷವಾಗಿ ಪರಿಶೀಲಿಸಿ ನಿಯಮಾನುಸಾರ ಕ್ರಮ ಕೈಗೊಳ್ಳಲು ಪೌರಾಯುಕ್ತರಿಗೆ ಸೂಚಿಸಿದರು.

ಸದಸ್ಯರಾದ ಶ್ರೀ.ಎನ್.ನಂಜುಂಡಯ್ಯರವರು ಮಾತನಾಡುತ್ತಾ 3ನೇ ವಾರ್ಡ್‌ಗೆ ಸಂಬಂಧಿಸಿದ ಹೊಳಲು ಸರ್ಕಲ್‌ನಲ್ಲಿ ನಿರ್ವಹಿಸಿರುವ ಕಾಮಗಾರಿಗಳ ಗುಣಮಟ್ಟದ ಬಗ್ಗೆ ಆಕ್ಷೇಪ ವ್ಯಕ್ತಪಡಿಸಿದರು.

ಸಭೆಯಲ್ಲಿ ಮಾನ್ಯ ಶಾಸಕರು ಮಾತನಾಡಿ ಸಾರ್ವಜನಿಕ ಹಿತದೃಷ್ಟಿಯಿಂದ ಸಂಚಾರಕ್ಕೆ ಅನುವು ಮಾಡಿ ಕೊಡಲು ಈ ಹಿಂದಿನ ಪ್ಯಾಕೇಜ್‌ನಲ್ಲಿ ಉಳಿದಿರುವ ಪರಿಮಾಣದಲ್ಲಿ ಕಾಮಗಾರಿ ನಿರ್ವಹಿಸಲು ಸೂಚಿಸಿದ್ದಾಗಿ ಸಭೆಗೆ ತಿಳಿಸಿ ಕಾಮಗಾರಿಗಳ ಗುಣಮಟ್ಟದ ಬಗ್ಗೆ 3ನೇ ಪಾರ್ಟಿ ತಪಾಸಣೆ ನಂತರ ಬಿಲ್ ಪಾವತಿಸಲು ಪೌರಾಯುಕ್ತರಿಗೆ ಸೂಚಿಸಿದರು.

ಸದಸ್ಯರುಗಳಾದ ಶ್ರೀ.ಎಂ.ಎಲ್.ಮಂಜುನಾಥ್‌ರವರು, ಶ್ರೀ.ಎಂ.ಜೆ.ಚಿಕ್ಕಣ್ಣರವರು, ಶ್ರೀ.ಟಿ.ಎನ್.ಶಂಕರೇಗೌಡ ರವರು ಮಾತನಾಡಿ ಹಿಂದಿನ ಸಭೆ ನಡವಳಿಕೆಯಲ್ಲಿ ನಾಗರೀಕ ಸೇವಾ ಟ್ರಸ್ಟ್ ಅಧ್ಯಕ್ಷರಾದ ಶ್ರೀ.ವೆಂಕಟೇಶಯ್ಯರವರ ಮೇಲೆ ಕ್ರಿಮಿನಲ್ ಮೊಖದ್ದಮೆ ದಾಖಲಿಸಲು ನಿರ್ಣಯಿಸಲಾಗಿದೆ. ನಗರಸಭೆಯಿಂದ ತಪ್ಪಾಗಿಲ್ಲ ಎಂದ ಮೇಲೆ ಕ್ರಮ ಕೈಗೊಳ್ಳುವುದೆಂದು ತಿಳಿಸಿದರು. ಶ್ರೀ.ಕೆ.ಎಲ್.ನಾಗೇಂದ್ರರವರು ಶ್ರೀ.ವೆಂಕಟೇಶಯ್ಯರವರು ತಪ್ಪು ಮಾಹಿತಿ ನೀಡಿದ್ದಾರೆಂದ ಮೇಲೆ ಕ್ರಿಮಿನಲ್ ಕೇಸು ಹಾಕಿ. ಅವರು ತಪ್ಪು ಮಾಹಿತಿ ನೀಡದಿದ್ದಲ್ಲಿ ಸಾಬೀತುಪಡಿಸಿಕೊಳ್ಳುತ್ತಾರೆಂದು ತಿಳಿಸಿದರು.

ಮಾನ್ಯ ಶಾಸಕರು ಮಾತನಾಡಿ ತಪ್ಪು ಮಾಹಿತಿ ನೀಡಿದ್ದಲ್ಲಿ ಕ್ರಮ ವಹಿಸಿ ಎಂದರು.

ನಂತರ ಹಿಂದಿನ ಸಭೆ ನಡವಳಿಕೆಗಳನ್ನು ಓದಿ ರೆಕಾರ್ಡು ಮಾಡಲಾಯಿತು.

**<u>ವಿಷಯ:2:–</u>** ಸರ್ಕಾರದಿಂದ ಬಂದಿರುವ ಆದೇಶ ಮತ್ತು ಸುತ್ತೋಲೆಗಳನ್ನು ಓದಿ ರೆಕಾರ್ಡು ಮಾಡುವ ವಿಚಾರ.

**<u>ತೀರ್ಮಾನ:2:–</u>** (1) ಸರ್ಕಾರದ ಸುತ್ತೋಲೆ ಸಂಖ್ಯೆ:ನಅಇ/32/ಎಂಎಲ್‌ಆರ್/2005 ದಿನಾಂಕ:16–6–2008 ಚುನಾಯಿತರಾದ ಕಾರ್ಪೋರೇಷನ್ ಕೌನ್ಸಿಲರ್‌ಗಳು ಮತ್ತು ತಮ್ಮ ಕುಟುಂಬದ ಸದಸ್ಯರುಗಳ ಆಸ್ತಿ ಮತ್ತು ಹೊಣೆಗಾರಿಕೆ ಪಟ್ಟಿಯನ್ನು ಮಹಾ ಪೌರರಿಗೆ ಸಲ್ಲಿಸುವ ಬಗ್ಗೆ .

(2) ಸರ್ಕಾರದ ಆದೇಶದ ಸಂಖ್ಯೆ:ನಅಇ/91/ಎಸ್‌ಎಫ್‌ಸಿ/2005 ಬೆಂಗಳೂರು ದಿನಾಂಕ:6–6–2008 ರೂ.10.84 ಲಕ್ಷ

(3) ಸರ್ಕಾರದ ಆದೇಶ ಸಂಖ್ಯೆ:ನಅಇ/46/ಎಸ್‌ಎಫ್‌ಸಿ/2006, ಬೆಂಗಳೂರು ದಿನಾಂಕ:31–3–2008 ರೂ.75,000/–

ಮೇಲ್ಕಂಡ ಸರ್ಕಾರದ ಸುತ್ತೋಲೆ ಮತ್ತು ಆದೇಶಗಳನ್ನು ಸಭೆಯಲ್ಲಿ ಓದಿ ರೆಕಾರ್ಡು ಮಾಡಲಾಯಿತು.

**ವಿಷಯ:3:–** 2008ನೇ ಫೆಬ್ರವರಿ, ಮಾರ್ಚಿ, ಏಪ್ರಿಲ್, ಮೇ ಮತ್ತು ಜೂನ್ ಮಾಹೆಗಳ ಜಮ ಖರ್ಚುಗಳನ್ನು ಓದಿ ರೆಕಾರ್ಡು ಮಾಡುವ ವಿಚಾರ.

**ತೀರ್ಮಾನ:3:–** ಮಾನ್ಯ ಶಾಸಕರು ಮಾತನಾಡುತ್ತಾ ಜಮೆ ಖರ್ಚುಗಳ ಬಗ್ಗೆ ಲೆಕ್ಕ ತಪಾಸಣೆ ಮಾಡುತ್ತಾರೆ. ಎಂದು ಸಭೆಗೆ ತಿಳಿಸಿದರು. ನಂತರ 2008ನೇ ಫೆಬ್ರವರಿ, ಮಾರ್ಚ್, ಏಪ್ರಿಲ್ , ಮೇ ಮತ್ತು ಜೂನ್ ಮಾಹೆಗಳ ಜಮೆ ಖರ್ಚುಗಳನ್ನು ಸಭೆಯಮಲ್ಲಿ ಸರ್ವಾನುಮತದಿಂದ ಒಪ್ಪಲಾಯಿತು.

**ವಿಷಯ:4:–**ಕಾರ್ಯಪಾಲಕ ಅಭಿಯಂತರರು, ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ, ಮಂಡ್ಯರವರ ಪತ್ರ ಸಂಖ್ಯೆ:ಕಜಮಂ/ಕಾಅ/ಮಂಡ್ಯ ವಿ/ಸ.ಅ.1/ಕ.ಸ.1/ಮಂಡ್ಯ ನೀಸವಿ/1435/2007–08 ದಿನಾಂಕ:5–12–2007ರಂತೆ ಮಂಡ್ಯ ನಗರದ ವಿದ್ಯಾನಗರ ಬಡಾವಣೆಯಲ್ಲಿ ರುವ 10ಲಕ್ಷ ಲೀಟರ್ ಸಾಮರ್ಥ್ಯದ ಮೇಲ್ಮಟ್ಟದ ಜಲ ಸಂಗ್ರಹಾಗಾರವನ್ನು ಪರಿವೀಕ್ಷಣೆಗೆ ಹಾಗೂ ತಾಂತ್ರಿಕ ಸಲಹೆ ನೀಡಲು ಮಂಡಳಿಗೆ ರೂ.55,000/–ಗಳನ್ನು ಪಾವತಿಸಿರುವುದಕ್ಕೆ ಒಪ್ಪಿ ಅನುಮೋದನೆ ನೀಡುವ ವಿಚಾರ.

**ತೀರ್ಮಾನ:4:–**ಪಾವತಿಸಬಹುದೆಂದು ಸಭೆಯಲ್ಲಿ ಸರ್ವಾನುಮತದಿಂದ ಒಪ್ಪಲಾಯಿತು.

**ವಿಷಯ:5:–**2008–09ನೇ ಸಾಲಿಗೆ ಶೇಕಡ 18ರ ಲೆಕ್ಕ ಶೀರ್ಷಿಕೆಯಡಿಯಲ್ಲಿ ರೂ.23.60ಲಕ್ಷಗಳನ್ನು ವಿನಿಯೋಗಿ ಸಲು ತಯಾರಿಸಿರುವ ಕ್ರಿಯಾ ಯೋಜನೆಯನ್ನು ಒಪ್ಪಿ ಅನುಮೋದಿಸುವ ವಿಚಾರ.

**ತೀರ್ಮಾನ:5:–** ಶ್ರೀ. ಹೆಚ್.ಸಿ.ಬೋರೇಗೌಡರವರು ಮಾತನಾಡಿ, ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಗಳ ನಗರ ಸಭಾ ಸದಸ್ಯರುಗಳನ್ನೊಳಗೊಂಡು ಸಮಿತಿಯನ್ನು ರಚಿಸಿ ಅವರ ಸಲಹೆ ಪಡೆದು ಕ್ರಿಯಾ ಯೋಜನೆ ತಯಾರಿಸಿ ಮುಂದಿನ ಸಭೆಗೆ ತರುವಂತೆ ಸೂಚಿಸಿದರು. ಇವರ ಸೂಚನೆಯನ್ನು ಸಭೆಯು ಸರ್ವಾನುಮತದಿಂದ ಒಪ್ಪಿ ಅನುಮೋದಿಸಲಾಯಿತು.

**ವಿಷಯ:6:–** ಕರ್ನಾಟಕ ಪುರಸಭಾ ಕಾಯಿದೆ 1964ರ ಕಲಂ 63ರ ಪ್ರಕಾರ ಸ್ಥಾಯಿ ಸಮಿತಿಯನ್ನು ರಚಿಸಲು ಚರ್ಚಿಸಿ ತೀರ್ಮಾನ ಕೈಗೊಳ್ಳತಕ್ಕ ವಿಚಾರ.

**ತೀರ್ಮಾನ:6:–** ಮುಂದಿನ ಸಭೆಗೆ ತರುವುದೆಂದು ಸಭೆಯಲ್ಲಿ ಸರ್ವಾನುಮತದಿಂದ ಒಪ್ಪಲಾಯಿತು.

**ವಿಷಯ:7:–** ಮಂಡ್ಯ ಕ್ಷೇತ್ರದ ಮಾನ್ಯ ಶಾಸಕರ ಪತ್ರದಲ್ಲಿ ಕೋರಿರುವಂತೆ ಮಂಡ್ಯ ನಗರದ ಪ್ರವಾಸಿ ಮಂದಿರ ಮತ್ತು ಸರ್ಕಾರಿ ಬಾಲಕರ ಕಾಲೇಜು ನಡುವೆ ಇರುವ ಪಿ.ಎ.ಎಸ್. ಇಂಜಿನಿಯರಿಂಗ್ ಕಾಲೇಜು ರಸ್ತೆಗೆ " ಶ್ರೀ ಕೆ.ವಿ ಶಂಕರಗೌಡ ರಸ್ತೆ " ಎಂದು ನಾಮಕರಣ ಮಾಡುವ ಬಗ್ಗೆ ಚರ್ಚಿಸಿ ತೀರ್ಮಾನ ಕೈಗೊಳ್ಳುವ ವಿಚಾರ.

**ತೀರ್ಮಾನ:7:–** " ಶ್ರೀ.ಕೆ.ವಿ.ಶಂಕರಗೌಡ ರಸ್ತೆ " ಎಂದು ನಾಮಕರಣ ಮಾಡಬಹುದೆಂದು ಸಭೆಯು ಸರ್ವಾನುಮತದಿಂದ ಒಪ್ಪಲಾಯಿತು.

**ವಿಷಯ:8:–** ನಗರಸಭೆಯ ಕೆಲವು ಮುಖ್ಯವಾದ ಅಧ್ಯಕ್ಷರು, ಉಪಾಧ್ಯಕ್ಷರು, ಪೌರಾಯುಕ್ತರು, ಸಹಾಯಕ ಕಾರ್ಯಪಾಲಕ ಅಭಿಯಂತರರು ಹಾಗೂ ಅಭಿಯಂತರರ ಕೊಠಡಿಗಳಿಗೆ ವಿದ್ಯುತ್ ವ್ಯವಸ್ಥೆಗಾಗಿ ಯು.ಪಿ.ಎಸ್. ಸಿಸ್ಟಮ್ ಅಳವಡಿಸಿರುವ ಬಾಬ್ತು ಬಿಲ್ ಮೊಬಲಗು ರೂ.45,493/–ಗಳನ್ನು ಪಾವತಿಸಿರುವುದಕ್ಕೆ ಒಪ್ಪಿಗೆ ನೀಡುವ ವಿಚಾರ.

**ತೀರ್ಮಾನ:8:–**ರೂ.45,493/–ಗಳನ್ನು ಪಾವತಿಸಿರುವುದಕ್ಕೆ ಸಭೆಯಲ್ಲಿ ಸರ್ವಾನುಮತದಿಂದ ಒಪ್ಪಿ ಅನುಮೋದಿಸ ಲಾಯಿತು.

ಶ್ರೀ.ಹೆಚ್.ಸಿ.ಬೋರೇಗೌಡರವರು ದಿನಾಂಕ: 30–4–2005ರ ಕೌನ್ಸಿಲ್ ಸಭೆಯಲ್ಲಿ ನಗರಸಭೆಯ ಜಯ ಚಾಮರಾಜೇಂದ್ರ ಟೌನ್ ಹಾಲ್‌ಗೆ ಅಗತ್ಯ ಸೌಲಭ್ಯಗಳನ್ನು ಮಾಡಿಸಲು ನಿರ್ಣಯ ಕೈಗೊಳ್ಳಲಾಗಿದೆ. ಕಾರ್ಯಗತಗೊಳಿಸಿರುವುದಿಲ್ಲ. ಅಗತ್ಯ ಸೌಲಭ್ಯಗಳನ್ನು ಒದಗಿಸಿ ಬಾಡಿಗೆ ಜಾಸ್ತಿ ಮಾಡುವಂತೆ ಸೂಚಿಸಿದರು.

ಮಾನ್ಯ ಶಾಸಕರು ಮಾತನಾಡಿ ವೇದಿಕೆ ವ್ಯವಸ್ಥೆ, ಧ್ವನಿವರ್ಧಕ ವ್ಯವಸ್ಥೆ , ಕುರ್ಚಿಗಳ ವ್ಯವಸ್ಥೆ ಹಾಗೂ ಇನ್ನಿತರೆ ಅಗತ್ಯ ಸೌಲಭ್ಯಗಳು ಇರುವುದಿಲ್ಲ. ಸೂಕ್ತ ವ್ಯವಸ್ಥೆ ಮಾಡಿಸುವಂತೆ ಸೂಚಿಸಿದರು.

ಶ್ರೀ.ಕೆ.ಎಲ್.ನಾಗೇಂದ್ರರವರು ಮಾತನಾಡಿ ಸಾರ್ವಜನಿಕರಿಗೆ ಅನುಕೂಲವಾಗುವಂತೆ ಟೌನ್ ಹಾಲ್‌ಗೆ ಅಗತ್ಯ ಸೌಲಭ್ಯಗಳನ್ನು ಒದಗಿಸಲು ಸೂಚಿಸಿದರು.

**ವಿಷಯ:9:–**ಮಂಡ್ಯ ನಗರಸಭೆಗೆ ಸಂಬಂಧಿಸಿದಂತೆ ಸ್ಥಳೀಯ ನ್ಯಾಯಾಲಯದಲ್ಲಿನ ಪ್ರಕರಣಗಳ ಬಾಬ್ತು ರೂ.30,900/–ಗಳು ಮತ್ತು ರಾಜ್ಯ ಉಚ್ಛ ನ್ಯಾಯಾಲಯದಲ್ಲಿನ ಪ್ರಕರಣಗಳ ಬಾಬ್ತು ರೂ.36,000/–ಗಳ ಬಿಲ್ ಮೊಬಲಗನ್ನು ಪಾವತಿಸುವ ವಿಚಾರ.

**ತೀರ್ಮಾನ:9:–** ಶ್ರೀ.ಹೆಚ್.ಸಿ.ಬೋರೇಗೌಡರವರು, ಶ್ರೀ.ಎಂ.ಎಲ್.ಮಂಜುನಾಥ್‌ರವರು, ಶ್ರೀ.ಚಲುವರಾಜುರವರು, ಶ್ರೀ.ಎನ್.ನಂಜುಂಡಯ್ಯರವರು ಮತ್ತು ಶ್ರೀ.ಕೆ.ಎಲ್.ನಾಗೇಂದ್ರರವರುಗಳು ಮಾತನಾಡಿ ಯಾವ ಯಾವ ನ್ಯಾಯಾಲಯದಲ್ಲಿ ಎಷ್ಟು ಪ್ರಕರಣಗಳು ದಾಖಲಾಗಿದೆ. ಎಷ್ಟು ಪ್ರಕರಣಗಳು ನಗರಸಭೆ ಪರವಾಗಿ ಆಗಿದೆ. ಪ್ರಕರಣಗಳು ಯಾವ ಯಾವ ಹಂತದಲ್ಲಿದೆ ಎಂಬುದರ ಬಗ್ಗೆ ವಿವರ ನೀಡುವಂತೆ ಕೋರಿದರಲ್ಲದೇ ನ್ಯಾಯಾಲಯದಲ್ಲಿರುವ ಪ್ರಕರಣಗಳಿಗೆ ಸಂಬಂಧಿಸಿದಂತೆ ವಿಷಯ ನಿರ್ವಾಹಕರುಗಳು ವಕೀಲರಿಗೆ ಸರಿಯಾಗಿ ಮಾಹಿತಿಗಳನ್ನು ಒದಗಿಸದೇ ನ್ಯಾಯಾಲಯಕ್ಕೆ ಹಾಜರಾಗದೇ ಪ್ರಕರಣಗಳು ನಗರಸಭೆ ವಿರುದ್ಧ ತೀರ್ಮಾನ ಆಗುತ್ತಿರುತ್ತವೆ. ಪೌರಾಯುಕ್ತರು ಈ ಬಗ್ಗೆ ಸೂಕ್ತ ಕ್ರಮ ವಹಿಸಿ ಪ್ರಕರಣಗಳಿಗೆ ಸಂಬಂಧಿಸಿದ ಮಾಹಿತಿಗಳನ್ನು ಸಕಾಲದಲ್ಲಿ ವಕೀಲರಿಗೆ ಒದಗಿಸಿ ನ್ಯಾಯಾಲಯಕ್ಕೆ ಹಾಜರಾಗಿ ನಗರಸಭೆ ಪರವಾಗಿ ಮೊಖದ್ದಮೆಗಳು ತೀರ್ಮಾನವಾಗಲು ಕ್ರಮವಹಿಸುವಂತೆ ಸೂಚಿಸಿದರು.

ಮಾನ್ಯ ಶಾಸಕರು ಇಂದಿನವರೆಗೆ ನಗರಸಭೆಗೆ ಸಂಬಂಧಿಸಿದಂತೆ ಬಾಕಿ ಇರುವ ಪ್ರಕರಣಗಳ ವಿವರವನ್ನು ನೀಡಲು ಸೂಚಿಸಿದರು.

ನಂತರ ನ್ಯಾಯಾಲಯಗಳ ಪ್ರಕರಣಗಳ ಬಾಬ್ತು ಬಿಲ್ಲ ಪಾವತಿಸಲು ಒಪ್ಪಲಾಯಿತು.

**ವಿಷಯ:10** : ಶ್ರೀ ಗೋವಿಂದರಾಜು, ಮರಕಾಡದೊಡ್ಡಿ, ಮಂಡ್ಯ ತಾಲ್ಲೂಕು ಇವರು ಮನವಿ ಸಲ್ಲಿಸಿ ಇವರ ಮಗನಾದ ಶ್ರೀ.ಶರತ್ ರವರು ಭಾರತೀಯ ಸೇನಾ ಪಡೆಯಲ್ಲಿ ಕೆಲಸ ನಿರ್ವಹಿಸುತ್ತಿದ್ದಾಗ ದಿನಾಂಕ:6–9–2004 ರಂದು ಉಗ್ರರು ಹಾರಿಸಿದ ಗುಂಡಿಗೆ ಬಲಿಯಾಗಿದ್ದು ಇವರ ಸಮಾಧಿಯನ್ನು ಸ್ವರ್ಣಸಂದ್ರ ಉದ್ಯಾನವನದಲ್ಲಿ ನೆರವೇರಿಸಿದ್ದು ಇವರ ಸವಿ ನೆನಪಿಗಾಗಿ ಇವರ ಮಗನ ಸಮಾಧಿಗೆ ಗ್ರಾನೈಟ್ ಶಿಲೆಯನ್ನು ಹಾಕಿಸಿಕೊಡಬೇಕೆಂದು ಕೋರಿರುವ ಬಗ್ಗೆ ತೀರ್ಮಾನ ಕೈಗೊಳ್ಳುವ ವಿಚಾರ.

**ತೀರ್ಮಾನ:10:–** ವಿಷಯದ ಬಗ್ಗೆ ಮಾನ್ಯ ಶಾಸಕರು ಮಾತನಾಡಿ ಹುತಾತ್ಮರ ಗೋರಿಗಳನ್ನು ನಿರ್ಮಿಸುವ ಬದಲು ಬೆಂಗಳೂರು ಪೋಲೀಸ್ ಕಛೇರಿ ಆವರಣದಲ್ಲಿರುವಂತೆ ಹುತಾತ್ಮರಾದ ಯೋಧರ ಸ್ಮಾರಕಗಳನ್ನು ನಿರ್ಮಿಸಿ ಹೆಸರು ಹಾಕಿಸುವುದೆಂದು ನೀಡಿದ ಸಲಹೆಯನ್ನು ಸಭೆಯು ಸರ್ವಾನುಮತದಿಂದ ಒಪ್ಪಲಾಯಿತು.

**ವಿಷಯ:11:–** ತುರ್ತು ಸಂದರ್ಭಗಳಲ್ಲಿ ಒಳಚರಂಡಿ ಪೈಪ್ ಲೈನ್ ಅಳವಡಿಸಲು ಮತ್ತು ದುರಸ್ತಿ ಕೆಲಸಗಳನ್ನು ಮಾಡಿಸುವ ಬಗ್ಗೆ ಚರ್ಚಿಸಿ ತೀರ್ಮಾನ ಕೈಗೊಳ್ಳತಕ್ಕ ವಿಚಾರ.

**ತೀರ್ಮಾನ:11:–** ಆಯಾಯ ವಾರ್ಡ್ ಸದಸ್ಯರ ಗಮನಕ್ಕೆ ತಂದು ತುರ್ತು ಸಂದರ್ಭಗಳಲ್ಲಿ ಯು.ಜಿ.ಡಿ. ಪೈಪ್ ಲೈನ್ ಅಳವಡಿಸಲು ಹಾಗೂ ದುರಸ್ತಿ ಕೆಲಸಗಳನ್ನು ಮಾಡಿಸುವುದೆಂದು ಸಭೆಯಲ್ಲಿ ಸರ್ವಾನುಮತದಿಂದ ಒಪ್ಪಲಾಯಿತು.

**ವಿಷಯ:12:–** ಖಾಸಗಿ ಬಸ್ ನಿಲ್ದಾಣಕ್ಕೆ ನೀರು ಸರಬರಾಜು ಕೊಳಾಯಿ ಸಂಪರ್ಕ ವ್ಯವಸ್ಥೆ ಹಾಗೂ ಒಳಚರಂಡಿ ಸೋಕ್ ಪಿಟ್ ಮ್ಯಾನ್‌ಹೋಲ್ ಚೇಂಬರನ್ನು ದುರಸ್ತಿ ಮಾಡಿಸುವ ಬಾಬ್ತು ಅಂದಾಜು ವೆಚ್ಚ ರೂ.75,000/–ಗಳಿಗೆ ಅನುಮೋದನೆ ನೀಡುವ ವಿಚಾರ.

**ತೀರ್ಮಾನ:12:–** ಮಾಡಿಸಬಹುದೆಂದು ಸಭೆಯಲ್ಲಿ ಸರ್ವಾಮತದಿಂದ ಒಪ್ಪಲಾಯಿತು.

**ವಿಷಯ:13:–** ಹನ್ನೆರಡನೇ ಹಣಕಾಸು ಯೋಜನೆಯಡಿಯಲ್ಲಿ ಮಂಡ್ಯ ನಗರಸಭೆಗೆ ಡಾಟಾ ಬೇಸ್‌ಗಾಗಿ ರೂ.10.00ಲಕ್ಷಗಳು ಬಿಡುಗಡೆಯಾಗಿದ್ದು ಉಳಿದಿರುವ ರೂ.5.28ಲಕ್ಷ ಅನುದಾನದಲ್ಲಿ ಕಛೇರಿಗೆ ಬೇಕಾಗಿರುವ

ಕಂಪ್ಯೂಟರ್, ಯು.ಪಿ.ಎಸ್., ಕಂಪ್ಯೂಟರ್ ಟೇಬಲ್ ಮತ್ತು ಕುರ್ಚಿಗಳನ್ನು ಮಾಡಿಸಿ ಅಳವಡಿಸಲು ಮತ್ತು ಎ. ಸಿ. ವ್ಯವಸ್ಥೆ ಮಾಡಿಸಲು ಅನುಮೋದನೆ ನೀಡತಕ್ಕ ವಿಚಾರ.

**ತೀರ್ಮಾನ:13:–**ನಿಯಮಾನುಸಾರ ಟೆಂಡರ್ ಕರೆದು ಮಾಡಿಸಲು ಸರ್ವಾನುಮತದಿಂದ ಒಪ್ಪಲಾಯಿತು.

**ವಿಷಯ:14:–** ಮಂಡ್ಯ ನಗರಸಭೆ ಕಛೇರಿಯಲ್ಲಿ ಸಹಾಯವಾಣಿ ನಿರ್ವಹಿಸಲು 2008–09ನೇ ಸಾಲಿಗೆ ಟೆಂಡರ್ ಕರೆಯಲಾಗಿದ್ದು ಸ್ವೀಕರಿಸಲಾಗಿರುವ ಟೆಂಡರ್‌ಗಳ ದರಗಳ ತುಲನಾತ್ಮಕ ವಿವರ ಪಟ್ಟಿಯನ್ನು ಪರಿಶೀಲಿಸಿ ಅತ್ಯಂದ ಕಡಿಮೆ ದರ ನಮೂದಿಸಿರುವ ಟೆಂಡರ್ ಅನ್ನು ಅಂಗೀಕರಿಸಿ ಅನುಮೋದನೆ ನೀಡತಕ್ಕ ವಿಚಾರ.

**ತೀರ್ಮಾನ:14:–** ಸದಸ್ಯರಾದ ಶ್ರೀ.ಎಂ.ಜೆ.ಚಿಕ್ಕಣ್ಣರವರು ಸಹಾಯವಾಣಿ ಟೆಂಡರ್‌ನಲ್ಲಿ ಪಾರದರ್ಶಕತೆ ಇರುವುದಿಲ್ಲ ಎಂದು ಅಭಿಪ್ರಾಯ ವ್ಯಕ್ತಪಡಿಸಿದರು.

ನಂತರ ಮರು ಟೆಂಡರ್ ಕರೆಯುವುದೆಂದು ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು.

**ವಿಷಯ:15:–** ನೈರ್ಮಲ್ಯ ವಿಭಾಗಕ್ಕೆ ಬೇಕಾದ ಕಂಟೇನರ್‌ಗಳನ್ನು ಖರೀದಿಸುವ ಬಗ್ಗೆ ತೀರ್ಮಾನ ಕೈಗೊಳ್ಳುವ ವಿಚಾರ.

**ತೀರ್ಮಾನ:15:–** ಅವಶ್ಯಕತೆಗೆ ಅನುಗುಣವಾಗಿ ನಿಯಮಾನುಸಾರ ಖರೀದಿಸಲು ಸರ್ವಾನುಮತದಿಂದ ತೀರ್ಮಾನಿಸಲಾಯಿತು.

**ವಿಷಯ:16:–** ಮಂಡ್ಯ ನಗರಸಭೆ ವ್ಯಾಪ್ತಿಯೊಳಗೆ ಒಳಚರಂಡಿ ಮ್ಯಾನ್ ಹೋಲ್ ಛೇಂಬರ್‌ಗಳ ಮುಚ್ಚಳಗಳನ್ನು ಅಳವಡಿಸಬೇಕಾಗಿರುವುದರಿಂದ ಮತ್ತು ಕೆಲವು ಮ್ಯಾನ್‌ಹೋಲ್ ಚೇಂಬರ್‌ಗಳನ್ನು ದುರಸ್ತಿ ಮಾಡಿಸಬೇಕಾಗಿರುವುದರಿಂದ ತುರ್ತಾಗಿ ಕೊಟೇಷನ್ ಕರೆದು ಮ್ಯಾನ್ ಹೋಲ್ ಚೇಂಬರ್ ಮುಚ್ಚಳಗಳನ್ನು ಖರೀದಿಸಿರುವ ಬಾಬ್ತು ಬಿಲ್ ಮೊಬಲಗು ರೂ.95,063/–ಗಳನ್ನು ಪಾವತಿಸಲು ಅನುಮೋದನೆ ನೀಡುವ ವಿಚಾರ.

**ತೀರ್ಮಾನ 16:–** ಕೊಟೇಷನ್ ಕರೆದು ಖರೀದಿಸಿರುವುದರಿಂದ ಪಾವತಿಸಬಹುದೆಂದು ಸಭೆಯಲ್ಲಿ ಸರ್ವಾನುಮತದಿಂದ ಒಪ್ಪಲಾಯಿತು.

**ವಿಷಯ:17:–** ಮಂಡ್ಯ ನಗರ ವ್ಯಾಪ್ತಿಯ ಬೀದಿ ದೀಪಗಳ ನಿರ್ವಹಣೆ ಗುತ್ತಿಗೆ ಅವಧಿಯು 2008ನೇ ಮೇ ಮಾಹೆಯ ಅಂತ್ಯಕ್ಕೆ ಮುಕ್ತಾಯಗೊಂಡಿದ್ದು ಮುಂದಿನ ಅವಧಿಗೆ ಮುಂದುವರೆಸಿಕೊಡಬೇಕೆಂದು ಮೇ: ಸಪ್ತಗಿರಿ ಎಂಟರಪ್ರೈಸಸ್, ಬೆಂಗಳೂರುರವರು ಸಲ್ಲಿಸಿರುವ ಮನವಿಯನ್ನು ಪರಿಶೀಲಿಸಿ ಗುತ್ತಿಗೆ ಅವಧಿಯನ್ನು ಮುಂದಿವರೆಸಿ ಕೊಡುವ ಬಗ್ಗೆ ತೀರ್ಮಾನ ಕೈಗೊಳ್ಳತಕ್ಕ ವಿಚಾರ

**ತೀರ್ಮಾನ:17:–** ಸಭೆಯಲ್ಲಿ ಚರ್ಚಿಸಲಾಗಿ ಮಾನ್ಯ ಪೌರಾಡಳಿತ ನಿರ್ದೇಶನಾಲಯದ ಸುತ್ತೋಲೆಯನ್ನು ಸಭೆಯಲ್ಲಿ ಓದಲಾಯಿತು. ಸದರಿ ಸತ್ತೋಲೆಯಂತೆ ಒಂದು ವರ್ಷದ ಅವಧಿಗೆ ಮುಂದುವರೆಸಲು ಅವಕಾಶವಿರುವುದರಿಂದ ಹಿಂದಿನ ದರದಲ್ಲಿಯೇ ಒಂದು ವರ್ಷದ ಅವಧಿಗೆ ಮೆ:ಸಪ್ತಗಿರಿ ಎಂಟರ್‌ಪ್ರೈಸಸ್, ಬೆಂಗಳೂರುರವರ ಟೆಂಡರನ್ನು ಮುಂದುವರೆಸಿ, ಅವಧಿ ಮುಗಿಯುವುದರೊಳಗಾಗಿ ಟೆಂಡರ್ ಪ್ರಕ್ರಿಯೆ ಕೈಗೊಳ್ಳುವುದೆಂದು ಸಭೆಯಲ್ಲಿ ಸರ್ವಾನು ಮತದಿಂದ ಒಪ್ಪಿ ತೀರ್ಮಾನಿಸಲಾಯಿತು.

**ವಿಷಯ:18:–** ಮಂಡ್ಯ ನಗರಸಭೆ ವ್ಯಾಪ್ತಿಯೊಳಗೆ ಬೀದಿ ನಾಯಿಗಳ ಹಾವಳಿ ಹೆಚ್ಚಾಗಿದ್ದು ಇವುಗಳನ್ನು ನಿಯಂತ್ರಿಸಲು ಸರ್ಕಾರ ರೂಪಿಸಿರುವ ನಿಯಮಾವಳಿಯಂತೆ ಕ್ರಮ ಕೈಗೊಳ್ಳುವ ವಿಚಾರ. ( ನಂಬರ್: 929, ನವದೆಹಲಿ, ಡಿಸೆಂಬರ್:24–12–2006)

**ತೀರ್ಮಾನ:18:–** ಸಭೆಯಲ್ಲಿ ಹಾಜರಿದ್ದ ಪಶು ಸಂಗೋಪನಾ ಇಲಾಖೆ ಅಧಿಕಾರಿಗಳು ಮಾತನಾಡಿ ಸರ್ಕಾರದ ನಿಯಮದಂತೆ ನಾಯಿಗಳನ್ನು ಸಾಯಿಸಲು ಅವಕಾಶವಿರುವುದಿಲ್ಲ. ಎ.ಬಿ.ಸಿ. ಕಾರ್ಯಕ್ರಮದ ಮೂಲಕ ನಾಯಿ ಗಳ ಸಂತಾನ ನಿಯಂತ್ರಣ ಮಾಡಬಹುದಾಗಿದೆ ಎಂದು ತಿಳಿಸಿದರು.

ಮಾನ್ಯ ಶಾಸಕರು ಕೇಂದ್ರ ಸರ್ಕಾರದ ಆದೇಶದಲ್ಲಿನ ನಿಯಮಗಳನ್ನು ಅನುಸರಿಸಿ ಕ್ರಮ ಕೈಗೊಳ್ಳಬೇಕಾಗಿದೆ ಎಂದರು.

ಶ್ರೀ.ಕೆ.ಎಲ್.ನಾಗೇಂದ್ರರವರು ಸ್ಥಾಯಿ ಸಮಿತಿ ರಚಿಸಿ ವಿಷಯವನ್ನು ಸ್ಥಾಯಿ ಸಮಿತಿಯಲ್ಲಿ ಮಂಡಿಸಿ ಅಲ್ಲಿ ತೆಗೆದುಕೊಳ್ಳುವ ನಿರ್ಣಯದಂತೆ ಕ್ರಮ ವಹಿಸಬಹುದಾಗಿದೆ ಎಂದು ಸೂಚಿಸಿದ್ದರ ಮೇರೆಗೆ ವಿಷಯನ್ನು ಸ್ಥಾಯಿ ಸಮಿತಿ ಸಭೆಗೆ ತರುವುದೆಂದು ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಿ ಮುಂದೂಡಲಾಯಿತು.

**ವಿಷಯ:19:–** ಸದಸ್ಯರಾದ ಶ್ರೀ.ಎನ್.ನಂಜುಂಡಯ್ಯರವರು ಮನವಿ ಸಲ್ಲಿಸಿ ಮಂಡ್ಯ ನಗರದ ಇಂದಿರಾ ವೃತ್ತ (ಹೊಳಲು ಸರ್ಕಲ್)ದಲ್ಲಿರುವ ಆಟೋ ನಿಲ್ದಾಣವನ್ನು ಪುನರ್ ನಿರ್ಮಾಣ ಮಾಡಲು ಕೋರಿರುವ ಬಗ್ಗೆ ಪರಿಶೀಲಿಸಿ ತೀರ್ಮಾನ ಕೈಗೊಳ್ಳತಕ್ಕ ವಿಚಾರ.
**ತೀರ್ಮಾನ:19:–**ಪರಿಶೀಲಿಸಿ ನಿಯಮಾನುಸಾರ ಕ್ರಮ ಕೈಗೊಳ್ಳಲು ಸಭೆಯು ಸರ್ವಾನುಮತದಿಂದ ಒಪ್ಪಲಾಯಿತು.

**ವಿಷಯ:20:–** ಸದಸ್ಯರಾದ ಶ್ರೀ.ಎಂ.ಎಲ್.ಮಂಜುನಾಥ್‌ರವರು ಮನವಿ ಸಲ್ಲಿಸಿ ಮಂಡ್ಯ ನಗರಸಭೆ ವ್ಯಾಪ್ತಿ ಯೊಳಗೆ ಕನ್ಸರ್ವೆನ್ಸಿ ಗಲ್ಲಿ ಜಾಗವನ್ನು ಆಯಾಯಾ ಖಾತೆದಾರರಿಗೆ ಅನುಗುಣವಾಗಿ ನೀಡಲು ಇಂದಿನ ಮಾರುಕಟ್ಟೆ ದರದಂತೆ ಕಿಮ್ಮತ್ತು ಪಾವತಿಸಿಕೊಂಡು ಖಾತೆ ಮಾಡಿಕೊಡುವ ಬಗ್ಗೆ ಚರ್ಚಿಸಿ ತೀರ್ಮಾನ ಕೈಗೊಳ್ಳತಕ್ಕ ವಿಚಾರ
**ತೀರ್ಮಾನ 20:–** ಕನ್ಸರ್ವೆನ್ಸಿ ಗಲ್ಲಿ ಜಾಗ ಮತ್ತು ಕೋಸು ಜಾಗಗಳನ್ನು ಆಜುಬಾಜು ಆಸ್ತಿ ಖಾತೆದಾರರುಗಳಿಗೆ ಸಮಭಾಗವಾಗಿ ಹಂಚಿಕೆ ಮಾಡಿ ಈಗಿನ ಮಾರುಕಟ್ಟೆ ದರದಂತೆ ಹಣ ಪಾವತಿಸಿಕೊಂಡು ಮಂಜೂರುಮಾಡಿ ಖಾತೆ ಮಾಡಿಕೊಡುವುದೆಂದು ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು.

**ವಿಷಯ:21:** ಮಂಡ್ಯ ನಗರಸಭೆ ಉಪಾಧ್ಯಕ್ಷರಾದ ಶ್ರೀ.ಎಸ್.ರಮೇಶ್ ರವರು ಮನವಿ ಸಲ್ಲಿಸಿ, ಸುಮಾರು 20–30 ವರ್ಷಗಳಿಂದ ಹಲವಾರು ಬಡಾವಣೆಗಳಲ್ಲಿ ವಾಸಿಸುತ್ತಿರುವ ಜನಗಳಿಗೆ ಮಾನ್ಯ ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ, ಬೆಂಗಳೂರುರವರ ಪತ್ರ ಸಂಖ್ಯೆ: ಪೌನಿ/ ಮಂಜಿ/ ಸಿಆರ್/219/2005–06 ದಿನಾಂಕ:3–4–2006ರಂತೆ ಹಲವು ಬಡಕುಟುಂಬಗಳು ನಗರಸಭೆಗೆ ಸೇರಿದ ಜಾಗವನ್ನು ಅಧಿಭೋಗಿಸುತ್ತಿರುವುದರಿಂದ ರಿಯಾಯಿತಿ ದರ ದಲ್ಲಿ ನೀಡುವುದನ್ನು ತಮ್ಮ ಹಂತದಲ್ಲಿಯೇ ಪರಿಶೀಲಿಸಿ ನಿಯಮಾನುಸಾರ ಸೂಕ್ತ ಕ್ರಮ ಕೈಗೊಂಡು ಹಕ್ಕುಪತ್ರ ನೀಡುವುದರ ಬಗ್ಗೆ ಚರ್ಚಿಸಿ ತೀರ್ಮಾನ ಕೈಗೊಳ್ಳುವ ವಿಚಾರ.
**ತೀರ್ಮಾನ:21:–** ಪರಿಶೀಲಿಸಿ ನಿಯಮಾನುಸಾರ ಕ್ರಮ ಕೈಗೊಳ್ಳುವುದೆಂದು ತೀರ್ಮಾನಿಸಲಾಯಿತು.

**ವಿಷಯ:22:–** ಸದಸ್ಯರಾದ ಶ್ರೀ: ಶಂಕರೇಗೌಡರವರ ಮನವಿ ಮೇರೆಗೆ ವಾರ್ಡ್ ನಂ.27ರಲ್ಲಿ 1ನೇ 'ಎ' ಅಡ್ಡ ರಸ್ತೆ ಯಲ್ಲಿ ಬಾಕ್ಸ್ ಚರಂಡಿ ನಿರ್ಮಾಣ ಮಾಡಲು ಅಂದಾಜು ವೆಚ್ಚ ರೂ. 47,000/–ಗಳಿಗೆ ಕಾಮಗಾರಿಯನ್ನು ನಿರ್ವಹಿಸಲು ಅನುಮೋದನೆ ನೀಡತಕ್ಕ ವಿಚಾರ.
**ತೀರ್ಮಾನ:22:–** ಅಧ್ಯಕ್ಷರು ಸಭೆಯಲ್ಲಿ ಮಾನ್ಯ ಶಾಸಕರೊಡನೆ ಚರ್ಚಿಸಿ ಪ್ರತೀ ವಾರ್ಡ್‌ಗೆ 10.00ಲಕ್ಷ ರೂಪಾಯಿಗಳ ಅನುದಾನವನ್ನು ನಗರಸಭೆಯ ಆರ್ಥಿಕ ಸ್ಥಿತಿಗನುಗುಣವಾಗಿ ಸದಸ್ಯರು ಸೂಚಿಸುವ ಕಾಮಗಾರಿಗಳನ್ನು ಮಾಡಿಸಲು ಮಂಜೂರುಮಾಡಲಾಗಿದೆ ಎಂದು ಘೋಷಿಸಿದರು.

ಅಧ್ಯಕ್ಷರ ಸೂಚನೆಯಂತೆ ಕಾಮಗಾರಿ ಮಾಡಿಸುವುದೆಂದು ಸಭೆಯಲ್ಲಿ ಸರ್ವಾನುಮತದಿಂದ ಒಪ್ಪಲಾಯಿತು ಹಾಗೂ ಸದಸ್ಯರಾದ ಶ್ರೀ.ಕೆ.ಎಲ್.ನಾಗೇಂದ್ರರವರು ಸಂಬಂಧಪಟ್ಟ ವಾರ್ಡ್ ಸದಸ್ಯರನ್ನು ಸಂಪರ್ಕಿಸಿ ಕಛೇರಿಯ ಅಭಿಯಂತರರು ಅಂದಾಜು ತಯಾರಿಸಿ ಹಾಗೂ ಕಾಮಗಾರಿಗಳಿಗೆ ಟೆಂಡರ್ ಕರೆದು ಮುಂದಿನ ಸಭೆಗೆ ಕಾಮಗಾರಿಗಳ ಟೆಂಡರನ್ನು ಅಂಗೀಕರಿಸಲು ಮಂಡಿಸಲು ಸೂಚಿಸಿದರು. ಇವರ ಸೂಚನೆಯನ್ನು ಸಭೆಯು ಸರ್ವಾನುಮತದಿಂದ ಒಪ್ಪಲಾಯಿತು.

**ವಿಷಯ:23:–** ವಾರ್ಡ್ ನಂಬರ್:21ರ ಸದಸ್ಯರಾದ ಶ್ರೀಮತಿ:ಕೆ.ಎಲ್.ಶಾರದಮ್ಮರವರಿಂದ ಬಂದಿರುವ ವಿಷಯ. ಹೊಸಹಳ್ಳಿ 3ನೇ ಅಡ್ಡ ರಸ್ತೆಯನ್ನು ಹಾಲಹಳ್ಳಿ ರಸ್ತೆಗೆ ಸಂಪರ್ಕ ಕಲ್ಪಿಸುವ ಬಗ್ಗೆ ಮಾನ್ಯ ಶಾಸಕರು ಮನವಿಯಲ್ಲಿ ಬಾಕಿ ಇರುವ ರಸ್ತೆಯನ್ನು ಹೊಸದಾಗಿ ನಿರ್ಮಿಸಿಕೊಟ್ಟು ಸಾರ್ವಜನಿಕರಿಗೆ ತಿರುಗಾಡಲು ಅನುಕೂಲ ಮಾಡಿಕೊಡ ಬೇಕೆಂದು ಕೋರಿದ್ದರ ಮೇರೆಗೆ ಅಂದಾಜು ವೆಚ್ಚ ರೂ.1.65ಲಕ್ಷಗಳಿಗೆ ಕಾಮಗಾರಿಯನ್ನು ಮಾಡಲು ಒಪ್ಪಿಗೆ ನೀಡತಕ್ಕ ವಿಚಾರ.

**ತೀರ್ಮಾನ:23:–** ವಿಷಯ ಸಂಖ್ಯೆ:22ರ ತೀರ್ಮಾನದಂತೆ ಕ್ರಮ ವಹಿಸಬಹುದಾಗಿದೆ ಎಂದು ಒಪ್ಪಲಾಯಿತು.

**ವಿಷಯ:24–** ವಾರ್ಡ್ ನಂಬರ್:21ರಲ್ಲಿ ವಿದ್ಯುತ್ ಕಂಬ ಅಳವಡಿಸಲು ಸೆಸ್ಕಾಂ, ಮಂಡ್ಯರವರು ತಯಾರಿಸಿರುವ ಅಂದಾಜು ವೆಚ್ಚ ರೂ.1,50,973/–ಗಳನ್ನು ಪಾವತಿಸಲು ಒಪ್ಪಿಗೆ ನೀಡುವ ವಿಚಾರ.

**ತೀರ್ಮಾನ:24:–** ಪಾವತಿಸಬಹುದೆಂದು ಸಭೆಯು ಸರ್ವಾನುಮತದಿಂದ ಒಪ್ಪಲಾಯಿತು.

**ವಿಷಯ:25:–** ಮಂಡ್ಯ ನಗರ ಜಬ್ಬರ್ ವೃತ್ತದ ವಿದ್ಯುತ್ ಮಾರ್ಗವನ್ನು ಸ್ಥಳಾಂತರಿಸಲು ಅಂದಾಜು ವೆಚ್ಚ ರೂ.10,950/–ಗಳನ್ನು ಸೆಸ್ಕಾಂ, ಮಂಡ್ಯರವರಿಗೆ ಪಾವತಿಸಲು ಒಪ್ಪಿಗೆ ನೀಡುವ ವಿಚಾರ.

**ತೀರ್ಮಾನ:25:–** ಪಾವತಿಸಬಹುದೆಂದು ಸಭೆಯಲ್ಲಿ ಸರ್ವಾನುಮತದಿಂದ ಒಪ್ಪಲಾಯಿತು.

**ವಿಷಯ:26:–** ಶ್ರೀಮತಿ: ಬಿ.ವಿ.ಮಮತಾ ಕೋಂ.ವೆಂಕಟೇಶ್ , ಮನೆ ನಂಬರ್:30, ಸ್ವರ್ಣಸಂದ್ರ, ಮಂಡ್ಯರವರು ಮನವಿ ಸಲ್ಲಿಸಿ ಮಂಡ್ಯ ನಗರದ ಮಹಾವೀರ ಸರ್ಕಲ್‌ನಲ್ಲಿರುವ ಹಾಪ್‌ಕಾಮ್ಸ್ ಮಳಿಗೆ ಪಕ್ಕದಲ್ಲಿ ನಗರ ಸಭೆಗೆ ಸೇರಿದ ಜಾಗದಲ್ಲಿ ನಂದಿನಿ ಹಾಲಿನ ಮಳಿಗೆ ತೆರೆಯಲು ನೆಲ ಬಾಡಿಗೆ ಆಧಾರದ ಮೇರೆಗೆ ಜಾಗ ಕೊಡಿಸಿಕೊಡ ಬೇಕೆಂದು ಕೋರಿರುವ ವಿಚಾರ.

**ತೀರ್ಮಾನ:26:–** ಸದರಿ ಸ್ಥಳದಲ್ಲಿ ಚರಂಡಿ ಇರುವುದರಿಂದ ಈ ಬಗ್ಗೆ ಸಂಬಂಧಪಟ್ಟ ಇಂಜಿನಿಯರ್ ರವರಿಂದ ಸ್ಥಳ ಪರಿಶೀಲನೆ ಮಾಡಿಸಿ ವರದಿ ಪಡೆದು ಸಾರ್ವಜನಿಕ ರಸ್ತೆಗೆ ತೊಡಕು ಆಗದಂತೆ, ನಗರದ ಸೌಂದರ್ಯ ಹಾಳಾಗದಂತೆ ಸ್ಥಳಾವಕಾಶವಿದ್ದಲ್ಲಿ ಮಾತ್ರ ನಿಯಮಾನುಸಾರ ಕೊಡಬಹುದೆಂದು ಸರ್ವಾನುಮತದಿಂದ ಒಪ್ಪಲಾಯಿತು.

**ವಿಷಯ:27:–** ಸದಸ್ಯರಾದ ಶ್ರೀ.ಹೆಚ್.ಸಿ.ಬೋರೇಗೌಡರವರು ವಾರ್ಡ್ ನಂಬರ್:17ರಲ್ಲಿ ಹೊಸಹಳ್ಳಿ ಅಂಗನವಾಡಿ ಯಿಂದ ಶ್ರೀ.ಬೋರಣ್ಣರವರ ಮನೆ ಮುಂದೆ ಸಂಪರ್ಕ ರಸ್ತೆಗೆ ಮೆಟಲಿಂಗ್ ಮತ್ತು ಡಾಂಬರೀಕರಣ ಕಾಮಗಾರಿ ಮಾಡಿಸಲು ಅಂದಾಜು ರೂ.2.00ಲಕ್ಷ ರೂಪಾಯಿಗಳಿಗೆ ಅನುಮೋದನೆ ನೀಡತಕ್ಕ ವಿಚಾರ.

**ತೀರ್ಮಾನ:27:–** ವಿಷಯ ಸಂಖ್ಯೆ:22ರ ತೀರ್ಮಾನದಂತೆ ಕ್ರಮ ವಹಿಸಬಹುದಾಗಿದೆ ಎಂದು ಒಪ್ಪಲಾಯಿತು.

**ವಿಷಯ:28:–** ವಾರ್ಡ್ ನಂಬರ್ 17ರಲ್ಲಿ ಹೌಸಿಂಗ್ ಬೋರ್ಡ್ ಕೃಷಿಕ್ ಫೌಂಡೇಷನ್ ಪಕ್ಕದ ರಸ್ತೆ, ಹೌಸಿಂಗ್ ಬೋರ್ಡ್ 2ನೇ ಹಂತದ ಪಾರ್ಕ್ ಪಕ್ಕದ ರಸ್ತೆ ಮತ್ತು ಬೇವಿನ ಕಟ್ಟೆ ಕ್ರಾಸ್ ರಸ್ತೆಗಳಲ್ಲಿ ವಿದ್ಯುತ್ ಕಂಬ ಹಾಕಿಸಿ ವಿದ್ಯುತ್ ಲೈನ್ ಅಳವಡಿಸಲು ಕೋರಿರುವ ವಿಚಾರ.

**ತೀರ್ಮಾನ:28:–** ಸಭೆಯಲ್ಲಿ ಸರ್ವಾನುಮತದಿಂದ ಒಪ್ಪಲಾಯಿತು.

**ವಿಷಯ::29:– ವಾ**ರ್ಡ್ ನಂಬರ್:17, ಹೌಸಿಂಗ್ ಬೋರ್ಡ್ ಕಾಲುವೆ ಪಕ್ಕದ ರಸ್ತೆಗೆ " ದಿ॥ಡಾ॥ವಿವೇಕಾನಂದ ರಸ್ತೆ " ಎಂದು ನಾಮಕರಣ ಮಾಡುವ ಬಗ್ಗೆ ತೀರ್ಮಾನ ಕೈಗೊಳ್ಳುವ ವಿಚಾರ.
**ತೀರ್ಮಾನ:29:–** ಸಭೆಯಲ್ಲಿ ಸರ್ವಾನುಮತದಿಂದ ಒಪ್ಪಲಾಯಿತು.

**ವಿಷಯ:30:–** ಸದಸ್ಯರುಗಳಾದ ಶ್ರೀಮತಿ:ಕೆ.ಎಲ್.ಶಾರದಮ್ಮ ಮತ್ತು ಶ್ರೀಮತಿ: ಕಲ್ಯೆಅರಸಿರವರುಗಳು ಮನವಿ ಸಲ್ಲಿಸಿ ವಾರ್ಡ್ ನಂಬರ್:20ರಲ್ಲಿರುವ ಸ್ಮಶಾನಕ್ಕೆ ಲಗತ್ತಾಗಿರುವಂತೆ ಪಕ್ಕದಲ್ಲಿರುವ ಭೂ ಮಾಲೀಕರಿಂದ ಜಾಗವನ್ನು ಭೂ ಸ್ವಾಧೀನಪಡಿಸಿಕೊಂಡು ಅವರಿಗೆ ಪರಿಹಾರ ನೀಡಿ ಸ್ಮಶಾನಕ್ಕೆ ಜಾಗವನ್ನು ಪಡೆದುಕೊಳ್ಳುವ ಬಗ್ಗೆ ಚರ್ಚಿಸಿ ತೀರ್ಮಾನ ಕೈಗೊಳ್ಳುವ ವಿಚಾರ.

**ತೀರ್ಮಾನ:30:–** ವಿಷಯವನ್ನು ಕಾರಣಾಂತರದಿಂದ ಚರ್ಚೆಯಿಂದ ಕೈಬಿಡಲಾಯಿತು.

**ವಿಷಯ:31–**ಸದಸ್ಯರಾದ ಶ್ರೀ.ಮತಿ:ಕೆ.ಭಾಗ್ಯಲಕ್ಷ್ಮಿರವರು ಮನವಿ ಸಲ್ಲಿಸಿ ವಾರ್ಡ್ ನಂಬರ್:9ರಲ್ಲಿ ಪೋಲೀಸ್ ಕ್ವಾರ್ಟರ್ಸ್ ಆವರಣದಲ್ಲಿರುವ ಬಾಕ್ಸ್ ಚರಂಡಿ ನಿರ್ಮಾಣ ಕಾಮಗಾರಿ ಅಂದಾಜು ರೂ.10.00ಲಕ್ಷ ಮತ್ತು ಎಂಬ್ಯಾಕ್ ಮೆಂಟ್ ಕಾಮಗಾರಿಗೆ ಅಂದಾಜು ರೂ.10.00ಲಕ್ಷ ಮತ್ತು ಚಾಮುಂಡೇಶ್ವರಿ ದೇವಸ್ಥಾನದ ದಕ್ಷಿಣದ ಕಡೆ ಇರುವ ರಸ್ತೆಗಳನ್ನು ಅಭಿವೃದ್ಧಿಪಡಿಸುವ ಕಾಮಗಾರಿ ಅಂದಾಜು ರೂ.10.00ಲಕ್ಷಗಳ ಕಾಮಗಾರಿಗಳನ್ನು ಮಾಡಿಸಲು ಅನುಮೋದನೆ ನೀಡತಕ್ಕ ವಿಚಾರ.

**ತೀರ್ಮಾನ:31:–** ವಿಷಯ ಸಂಖ್ಯೆ:22ರ ತೀರ್ಮಾನದಂತೆ ಕ್ರಮ ವಹಿಸಬಹುದಾಗಿದೆ ಎಂದು ಒಪ್ಪಲಾಯಿತು.

**ವಿಷಯ:32–** ನಗರಸಭಾ ಸದಸ್ಯರಾದ ಶ್ರೀಮತಿ: ಪುಷ್ಪಲತಾರವರಿಂದ ಬಂದಿರುವ ವಿಚಾರ. ವಾರ್ಡ್ ನಂಬರ್: 25ರಲ್ಲಿ ಲೇಬರ್ ಕಾಲೋನಿಯ 2,3 ಮತ್ತು 4ನೇ ಹಾಗೂ ತಾವರೆಗೆರೆ ವಾಟರ್ ಟ್ಯಾಂಕ್ ರಸ್ತೆಯಲ್ಲಿ ಶ್ರೀಮತಿ: ಮೀರಾ ಶಿವಲಿಂಗಯ್ಯರವರ ಮನೆ ಮುಂಭಾಗದ ಚರಂಡಿಗಳು ಶಿಥಿಲಗೊಂಡಿದ್ದು ಸದರಿ ಚರಂಡಿ ದುರಸ್ತಿ ಕಾಮಗಾರಿ ಅಂದಾಜು ರೂ.5.00ಲಕ್ಷಗಳ ಕಾಮಗಾರಿ ಮಾಡಿಸುವ ಬಗ್ಗೆ ಅನುಮೋದಿಸುವ ವಿಚಾರ.

**ತೀರ್ಮಾನ:32:–** ವಿಷಯ ಸಂಖ್ಯೆ:22ರ ತೀರ್ಮಾನದಂತೆ ಕ್ರಮ ವಹಿಸಬಹುದಾಗಿದೆ ಎಂದು ಒಪ್ಪಲಾಯಿತು.

**ವಿಷಯ:33:–** ವಾರ್ಡ್ ನಂಬರ್:25, ನೆಹರುನಗರ 2ನೇ ಕ್ರಾಸ್ ಮಂಡ್ಯ ರಮೇಶ್‌ರವರ ಮನೆ ಮುಂಬಾಗದ ರಸ್ತೆಯಲ್ಲಿ ಹೊಸದಾಗಿ 2ಸಂಖ್ಯೆ ವಿದ್ಯುತ್ ಕಂಬಗಳು ಮತ್ತು ವಿದ್ಯುತ್ ಲೈನ್ ಅಳವಡಿಸುವ ಬಗ್ಗೆ ತೀರ್ಮಾನ ಕೈಗೊಳ್ಳತಕ್ಕ ವಿಚಾರ.

**ತೀರ್ಮಾನ:33:–** ಸರ್ವಾನುಮತದಿಂದ ಒಪ್ಪಲಾಯಿತು.

**ವಿಷಯ:34:–** ಸದಸ್ಯರಾದ ಶ್ರೀಮತಿ:ಬಿ.ಎನ್.ಸವಿತಾರವರು ಮನವಿ ಸಲ್ಲಿಸಿ , ವಾರ್ಡ್ ನಂಬರ್:34ರಲ್ಲಿ ಮೈಸೂರು–ಬೆಂಗಳೂರು ಹೆದ್ದಾರಿ ಮತ್ತು ಹೆಬ್ಬಳ್ಳದಿಂದ ಬಿ.ಟಿ.ಲಲಿತಾ ನಾಯಕ್ ಬಡಾವಣೆ ಹಾಗೂ ಚಿಕ್ಕೇಗೌಡನ ದೊಡ್ಡಿಗೆ ಹೋಗುವ ರಸ್ತೆಯಲ್ಲಿ ಬೀದಿ ದೀಪಗಳ ವ್ಯವಸ್ಥೆ ಮಾಡಿಸಿಕೊಡುವಂತೆ ಕೋರಿರುವ ಮೇರೆಗೆ ಬೀದಿ ದೀಪಗಳನ್ನು ಖರೀದಿಸಿ ಅಳವಡಿಸುವ ಬಗ್ಗೆ ತೀರ್ಮಾನ ಕೈಗೊಳ್ಳತಕ್ಕ ವಿಚಾರ.

**ತೀರ್ಮಾನ:34:–** ಸದಸ್ಯರಾದ ಶ್ರೀ.ಕೆ.ಎಲ್.ನಾಗೇಂದ್ರರವರು ಮೈಸೂರು–ಬೆಂಗಳೂರು ಹೆದ್ದಾರಿ ಹೆಬ್ಬಳ್ಳದಿಂದ ಸ್ವರ್ಣಸಂದ್ರದವರೆಗೆ, ಕಲ್ಲಹಳ್ಳಿಯಿಂದ ಕಿರಗಂದೂರು ರಸ್ತೆವರೆಗೆ ಟ್ಯೂಬಿಲರ್ ಬೀದಿ ದೀಪಗಳನ್ನು ಸರ್ಕಾರದಿಂದ ಬಿಡುಗಡೆಯಾಗಿರುವ ಟಿ.ಎಫ್.ಸಿ. ಮುಕ್ತ ನಿಧಿ ಅನುದಾನದಲ್ಲಿ ಕೈಗೊಳ್ಳುವಂತೆ ಸೂಚಿಸಿದರು. ಸದಸ್ಯರ ಸಲಹೆಯನ್ನು ಸಭೆಯಲ್ಲಿ ಒಪ್ಪಲಾಯಿತು.

ಸಭೆಯಲ್ಲಿ ಬಿ.ಟಿ.ಲಲಿತಾ ನಾಯಕ್ ಬಡಾವಣೆ ಹಾಗೂ ಚಿಕ್ಕೇಗೌಡನ ದೊಡ್ಡಿಗೆ ಹೋಗುವ ರಸ್ತೆಯಲ್ಲಿ ಬೀದಿ ದೀಪದ ವ್ಯವಸ್ಥೆಯನ್ನು ಶಾಸಕರ ಅನುದಾನದಲ್ಲಿ ಮಾಡಿಸಿಕೊಡುವುದಾಗಿ ಮಾನ್ಯ ಶಾಸಕರು ತಿಳಿಸಿದರು.

**ವಿಷಯ:35:–** ವಾರ್ಡ್ ನಂಬರ್:34 ಚಿಕ್ಕೇಗೌಡದೊಡ್ಡಿ ಮಾರುತಿ ಬಡಾವಣೆಯಿಂದ ಹಾಗೂ ಸ್ವರ್ಣದಿಂದ ಹರಿದು ಬರುವ ಕೊಳಚೆ ನೀರು ಮುಂದೆ ಸರಾಗವಾಗಿ ಹರಿದು ಹೋಗಲು ಮಳೆ ನೀರಿನ ಚರಂಡಿಯನ್ನು ನಿರ್ಮಿಸುವ ಬಗ್ಗೆ ತೀರ್ಮಾನ ಕೈಗೊಳ್ಳತಕ್ಕ ವಿಚಾರ.

**ತೀರ್ಮಾನ:35:–** ವಿಷಯ ಸಂಖ್ಯೆ:22ರ ತೀರ್ಮಾನದಂತೆ ಕ್ರಮ ವಹಿಸಬಹುದಾಗಿದೆ ಎಂದು ಒಪ್ಪಲಾಯಿತು.

**ವಿಷಯ:36:–** ಹೊಸಹಳ್ಳಿ 3ನೇ ಕ್ರಾಸ್‌ನಲ್ಲಿ ಶ್ರೀ.ಗೋಪಿನಾಥ್‌ರವರ ಮನೆಯಿಂದ ತೋಟದ ಮೂಲೆ ಮನೆ ವರೆಗೆ ಒಳಚರಂಡಿ ಪೈಪ್ ಲೈನ್ ಮತ್ತು ಚೇಂಬರ್‌ಗಳನ್ನು ನಿರ್ಮಿಸುವ ಬಾಬ್ತು ಅಂದಾಜು ವೆಚ್ಚ ರೂ.30,000/– ಗಳಿಗೆ ಅನುಮೋದನೆ ನೀಡತಕ್ಕ ವಿಚಾರ.

**ತೀರ್ಮಾನ:36:–** ವಿಷಯ ಸಂಖ್ಯೆ:22ರ ತೀರ್ಮಾನದಂತೆ ಕ್ರಮ ವಹಿಸಬಹುದಾಗಿದೆ ಎಂದು ಒಪ್ಪಲಾಯಿತು.

**ವಿಷಯ:37:–** ಸದಸ್ಯರಾದ ಶ್ರೀ.ಶಂಕರೇಗೌಡರವರು ಮನವಿ ಸಲ್ಲಿಸಿ ವಾರ್ಡ್ ನಂಬರ್:35, ಸಕ್ಕರೆ ನಗರದಲ್ಲಿ ವಿದ್ಯುತ್ ಕಂಬ ಮತ್ತು ಬೀದಿ ದೀಪಗಳ ವ್ಯವಸ್ಥೆ ಇಲ್ಲದಿರುವುದರಿಂದ ಪೋಸ್ಟ್ ಆಫೀಸ್ ರಸ್ತೆಯ ಕೊನೆಗೆ

ಅರಳಿ ಕಟ್ಟೆ ರಸ್ತೆ ಎಡ ಭಾಗ ಮತ್ತು ಬಲಭಾಗದ ರಸ್ತೆಗಳಿಗೆ ಮತ್ತು 'ಎಂ' ಟೈಪ್‌ನ ರಾಮಣ್ಣರವರ ಮನೆ ರಸ್ತೆಗೆ ಬೀದಿ ದೀಪ ಅಳವಡಿಸದೆ ಕಂಬಕ್ಕೆ ವಿದ್ಯುತ್ ತಂತಿ ಅಳವಡಿಸುವ ಬಗ್ಗೆ ತೀರ್ಮಾನ ಕೈಗೊಳ್ಳುವ ವಿಚಾರ.

**ತೀರ್ಮಾನ**:37:– ವಿಷಯ ಸಂಖ್ಯೆ:22ರ ತೀರ್ಮಾನದಂತೆ ಕ್ರಮ ವಹಿಸಬಹುದೆಂದು ಒಪ್ಪಲಾಯಿತು.

**ವಿಷಯ**:38– ಸದಸ್ಯರಾದ ಶ್ರೀ.ಲೋಕೇಶ್‌ರವರು ಮನವಿ ಸಲ್ಲಿಸಿ ವಾರ್ಡ್ ನಂಬರ್:8, ಕೆ.ಮರೀಗೌಡ ಬಡಾವಣೆ 2ನೇ ಕ್ರಾಸ್‌ನಲ್ಲಿ ಗಣೇಶ ದೇವಸ್ಥಾನಕ್ಕೆ ಹೊಂದಿಕೊಂಡಿರುವಂತೆ ಇರುವ ನಗರಸಭೆ ಖಾಲಿ ಜಾಗದಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರ ನಿರ್ಮಿಸಲು 100'X80ಅಡಿ ಅಳತೆಯ ನಿವೇಶವನ್ನು ಜಿಲ್ಲಾ ಆರೋಗ್ಯ ಕುಟುಂಬ ಕಲ್ಯಾಣ ಅಧಿಕಾರಿಗಳು, ಜಿಲ್ಲಾ ಪಂಚಾಯತ್, ಮಂಡ್ಯರವರಿಗೆ ಮಂಜೂರುಮಾಡಿ ಹಸ್ತಾಂತರ ಮಾಡುವ ಬಗ್ಗೆ ಚರ್ಚಿಸಿ ತೀರ್ಮಾನ ಕೈಗೊಳ್ಳತಕ್ಕ ವಿಚಾರ.

**ತೀರ್ಮಾನ**:38:– ಗಣಪತಿ ದೇವಸ್ಥಾನಕ್ಕೆ ಹೊಂದಿಕೊಂಡಿರುವ ಪೂರ್ವ–ಪಶ್ಚಿಮ 100(ನೂರು)ಅಡಿಗಳು, ಉತ್ತರ–ದಕ್ಷಿಣ 80(ಎಂಭತ್ತು) ಅಡಿಗಳ ನಿವೇಶನವನ್ನು ಪ್ರಾಥಮಿಕ ಆರೋಗ್ಯ ಕೇಂದ್ರ ಕಟ್ಟಡ ನಿರ್ಮಾಣಕ್ಕಾಗಿ ಜಿಲ್ಲಾ ಆರೋಗ್ಯ ಕುಟುಂಬ ಕಲ್ಯಾಣ ಅಧಿಕಾರಿಗಳು, ಜಿಲ್ಲಾ ಪಂಚಾಯತ್, ಮಂಡ್ಯರವರಿಗೆ ಹಸ್ತಾಂತರಿಸಲು ಸಭೆಯು ಸರ್ವಾನುಮತದಿಂದ ಒಪ್ಪಲಾಯಿತು

**ವಿಷಯ**:39– ಮಂಡ್ಯ ನಗರಸಭೆಯಲ್ಲಿ ಪೌರಕಾರ್ಮಿಕರಾಗಿ ಕರ್ತವ್ಯ ನಿರ್ವಹಿಸುತ್ತಿರುವ ಈ ಕೆಳಕಂಡ ನೌಕರರುಗಳ ಮನವಿ ಸಲ್ಲಿಸಿ ಹಾಜರುಪಡಿಸಿರುವ ವೈದ್ಯಕೀಯ ವೆಚ್ಚವನ್ನು ಮರುಪಾವತಿಸಲು ಕೋರಿರುವ ಬಗ್ಗೆ ತೀರ್ಮಾನ ಕೈಗೊಳ್ಳುವ ವಿಚಾರ.

(1) ಶ್ರೀ.ಮಹದೇವ , ಪೌರಕಾರ್ಮಿಕರು ರೂ. 8,170/–
(2) ಶ್ರೀ.ರಾಮ ಬಿನ್ ಕ್ಯಾತುಂಗೆರೆ ರಾಮ ರೂ. 9,984/–
(3) ಶ್ರೀಮತಿ:ಲಕ್ಷ್ಮಮ್ಮ,ಪೌರಕಾರ್ಮಿಕರು (ಮಗ ಶಿವಕುಮಾರ್‌ರವರ ವೈದ್ಯಕೀಯ ವೆಚ್ಚ) ರೂ.1,06,268/–

**ತೀರ್ಮಾನ**:39:–ನೌಕರರಿಗೆ ವೈದ್ಯಕೀಯ ವೆಚ್ಚವನ್ನು ಮರಪಾವತಿಸಲು ಸಭೆಯಲ್ಲಿ ಸರ್ವಾನುಮತದಿಂದ ಒಪ್ಪಲಾಯಿತು.

**ವಿಷಯ**:40:– ಸರ್ಕಾರದ ಅಧಿಸೂಚನೆ ಸಂಖ್ಯೆ: ಸರ್ಕಾರದ ಅಧಿಸೂಚನೆ ಸಂಖ್ಯೆ: Sub CVC/MND/2007–08, Mandya dated 28th February, 2008 ರಂತೆ ಮಂಡ್ಯ ಉಪ ನೋಂದಣಾಧಿಕಾರಿಗಳ ಕಛೇರಿ ವ್ಯಾಪ್ತಿಗೆ ಬರುವ ನಗರಸಭೆಗೆ ಒಳಪಟ್ಟಿರುವ ಗೃಹ ನಿವೇಶನಗಳು ಮತ್ತು ವಾಣಿಜ್ಯ ನಿವೇಶನಗಳ ಮಾರುಕಟ್ಟೆ ಬೆಲೆಯ ಮಾರ್ಗಸೂಚಿ ಪಟ್ಟಿಯಂತೆ 2007–08ರಿಂದ ಜಾರಿಗೆ ಬರಲಿರುವ ಮಾರ್ಗಸೂಚಿ ಬೆಲೆಪಟ್ಟಿಯನ್ನು ಒಪ್ಪಿ ಅನುಮೋದಿಸುವ ವಿಚಾರ.

**ತೀರ್ಮಾನ**:40:–ಸರ್ಕಾರದ ಅಧಿಸೂಚನೆಯಂತೆ ಕ್ರಮ ವಹಿಸಲು ಸಭೆಯು ಸರ್ವಾನುಮತದಿಂದ ಒಪ್ಪಲಾಯಿತು.

**ವಿಷಯ**:41:– ಅಧ್ಯಕ್ಷರ ಅಪ್ಪಣೆ ಮೇರೆಗೆ ಬರಬಹುದಾದ ಇತರೆ ವಿಷಯಗಳು.

**ವಿಷಯ ಸಂಖ್ಯೆ**:41(1):– ಸದಸ್ಯರಾದ ಶ್ರೀಮತಿ:ಆಯಿಷಾ ತಬಸುಮ್ ರವರಿಂದ ಬಂದಿರುವ ವಿಷಯ. ಯತ್ತಗದಹಳ್ಳಿ ಮುಸ್ಲಿಂ ಸ್ಮಶಾನ ಅಭಿವೃದ್ಧಿ ಕಾಮಗಾರಿಯನ್ನು ಮಾಡಿಸಿಕೊಡಬೇಕೆಂದು ಕೋರಿರುವ ಬಗ್ಗೆ ಚರ್ಚಿಸಿ ತೀರ್ಮಾನ ಕೈಗೊಳ್ಳುವ ವಿಚಾರ.

**ತೀರ್ಮಾನ**:41(1):– ಒಪ್ಪಲಾಯಿತು.

**ವಿಷಯ**:41(2):– 11ನೇ ವಾರ್ಡ್ ಸದಸ್ಯರಾದ ಶ್ರೀ.ಎಂ.ಪಿ.ಅರುಣ್ ಕುಮಾರ್‌ರವರಿಂದ ಬಂದಿರುವ ವಿಷಯ. ಮಂಡ್ಯ ನಗರದ 11ನೇ ವಾರ್ಡ್ ವಿದ್ಯಾನಗರದಲ್ಲಿರುವ ಶ್ರೀ.ವೆಂಕಟಗಿರಿಯಪ್ಪ ಉದ್ಯಾನವನದಲ್ಲಿರುವ ಓವರ್ ಹೆಡ್ ಟ್ಯಾಂಕ್ ಕೆಳಗೆ ಇರುವ ಕೊಠಡಿಗಳ ಕಿಟಕಿ ಬಾಗಿಲು ಮುರಿದು ಹೋಗಿದ್ದು ಸದರಿ ಕೊಠಡಿಗಳು ಶಿಥಿಲಾವಸ್ಥೆಯಲ್ಲಿರುವುದರಿಂದ ಸದರಿ ಕೊಠಡಿಗಳನ್ನು ದುರಸ್ತಿ ಮಾಡಿಸಿಕೊಡಬೇಕೆಂದು ಕೋರಿರುವ ಬಗ್ಗೆ ತೀರ್ಮಾನ ಕೈಗೊಳ್ಳುವ ವಿಚಾರ.

**ತೀರ್ಮಾನ**:41(2):– ದುರಸ್ತಿ ಮಾಡಿಸುವುದೆಂದು ಸರ್ವಾನುಮತದಿಂದ ತೀರ್ಮಾನಿಸಲಾಯಿತು.

**ವಿಷಯ ಸಂಖ್ಯೆ:41(3):–**ಶ್ರೀ.ನಾಗು ಬಿನ್ ಪುಟ್ಟಸ್ವಾಮಿ, ಮನೆ ನಂಬರ್:2659/1, ಗಾಂಧಿನಗರದಲ್ಲಿ ವಾಸವಿದ್ದು ಇವರು ಅಂಗವಿಕಲರಾಗಿರುತ್ತಾರೆ. ಇವರು ಕಲಾ ಮಂದಿರದ ರಸ್ತೆಯ ಪಕ್ಕದಲ್ಲಿ ಕ್ಯಾಂಟೀನ್ ನಡೆಸಲು ಅನುಮತಿ ಕೋರಿದ್ದು ಇವರಿಗೆ ಸ್ಥಳಾವಕಾಶ ನೀಡಬೇಕೆಂದು ಸದಸ್ಯರಾದ ಶ್ರೀ.ಎಂ.ಪಿ.ಅರುಣ್‌ಕುಮಾರ್‌ರವರಿಂದ ಬಂದಿರುವ ವಿಷಯದ ಬಗ್ಗೆ ತೀರ್ಮಾನ ಕೈಗೊಳ್ಳುವ ವಿಚಾರ.

**ತೀರ್ಮಾನ:41(3):–** ಸ್ಥಾಯಿ ಸಮಿತಿ ಸಭೆಗೆ ತರುವುದೆಂದು ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು.

**ವಿಷಯ:41(4):–**13ನೇ ವಾರ್ಡ್ ಸದಸ್ಯರಾದ ಶ್ರೀ.ಎಂ.ಎಲ್.ಮಂಜುನಾಥ್ ರವರಿಂದ ಬಂದಿರುವ ವಿಷಯ. ಗಾಂಧಿನಗರ 9,10 ಮತ್ತು 11ನೇ ಕ್ರಾಸ್ ರಸ್ತೆಗಳಿಗೆ ಡಾಂಬರೀಕರಣ ಮತ್ತು ಸ್ಲಾಬ್ ಡ್ರೈನ್ ಮಾಡಿಸಿಕೊಡಬೇಕೆಂದು ಕೋರಿರುವ ಬಗ್ಗೆ ಚರ್ಚಿಸಿ ತೀರ್ಮಾನ ಕೈಗೊಳ್ಳುವ ವಿಚಾರ. ಅಂದಾಜು ಮೊತ್ತ ರೂ.9.50ಲಕ್ಷ.

**ತೀರ್ಮಾನ:41(4):–** ವಿಷಯ ಸಂಖ್ಯೆ:22ರ ತೀರ್ಮಾನದಂತೆ ಕ್ರಮ ವಹಿಸಬಹುದೆಂದು ಒಪ್ಪಲಾಯಿತು.

**ವಿಷಯ ಸಂಖ್ಯೆ:41(5)**: 21ನೇ ವಾರ್ಡ್ ಸದಸ್ಯರಾದ ಶ್ರೀಮತಿ:ಕೆ.ಎಲ್.ಶಾರದಮ್ಮರವರಿಂದ ಬಂದಿರುವ ವಿಷಯ. ಹೊಸಹಳ್ಳಿ ದೊಡ್ಡ ಮೋರಿಗೆ ಸ್ಲ್ಯಾಬ್ ಕವರ್ ಮಾಡಿಸುವ ಬಗ್ಗೆ ಅಂದಾಜು ಮೊತ್ತ ರೂ.4.00ಲಕ್ಷಗಳಿಗೆ ಅನುಮೋದನೆ ನೀಡುವ ವಿಚಾರ.

**ತೀರ್ಮಾನ:41(5):–** ವಿಷಯ ಸಂಖ್ಯೆ:22ರ ತೀರ್ಮಾನದಂತೆ ಕ್ರಮ ವಹಿಸಬಹುದೆಂದು ಒಪ್ಪಲಾಯಿತು.

**ವಿಷಯ:41(6)**: 20ನೇ ವಾರ್ಡ್ ಸದಸ್ಯರಾದ ಶ್ರೀಮತಿ.ಕಲೈಅರಸಿರವರಿಂದ ಬಂದಿರುವ ವಿಷಯ. ಸ್ಟಾರ್ಮ್ ವಾಟರ್ ಡ್ರೈನ್‌ನಿಂದ ಸಿಲ್ಟನ್ನು ತೆಗೆಸುವ ಬಗ್ಗೆ ಚರ್ಚಿಸಿ ತೀರ್ಮಾನ ಕೈಗೊಳ್ಳುವ ವಿಚಾರ (ಅಂದಾಜು ವೆಚ್ಚ ರೂ.85,000/–)

**ತೀರ್ಮಾನ:41(6):–** ವಿಷಯ ಸಂಖ್ಯೆ:22ರ ತೀರ್ಮಾನದಂತೆ ಕ್ರಮ ವಹಿಸಬಹುದೆಂದು ಒಪ್ಪಲಾಯಿತು.

**ವಿಷಯ: 41(7):** ವಾರ್ಡ್ ನಂಬರ್:14ರಲ್ಲಿರುವ ಸಿ.ಎಸ್.ಐ.ಸಾಡೆ ಸ್ಮಾರಕ ದೇವಾಲಯಕ್ಕೆ ಸೇರಿದ ಸ್ಮಶಾನದ ಜಾಗದಲ್ಲಿ ಶೆಲ್ಟರ್ ಮತ್ತು ಶೌಚಾಲಯಗಳ ಕಾಮಗಾರಿಯನ್ನು ಮಾಡಿಸುವ ಬಗ್ಗೆ ಚರ್ಚಿಸಿ ತೀರ್ಮಾನ ಕೈಗೊಳ್ಳುವ ವಿಚಾರ. (ಅಂದಾಜು ವೆಚ್ಚ ರೂ.6.00ಲಕ್ಷ.

**ತೀರ್ಮಾನ:41(7):–** ಒಪ್ಪಲಾಯಿತು.

**ವಿಷಯ:41(8):–** ವಾರ್ಡ್ ನಂಬರ್: 19ರ ಅಶೋಕನಗರ 2ನೇ ಕ್ರಾಸ್‌ನಲ್ಲಿ ಯು.ಜಿ.ಡಿ. ಲೈನ್ ಸಂಪರ್ಕ ಕಲ್ಪಿಸುವ ಬಗ್ಗೆ ಸದಸ್ಯರಾದ ಶ್ರೀ.ಶಿವಪ್ರಕಾಶ್ ಬಾಬುರವರು ಕೋರಿರುವ ಬಗ್ಗೆ ಚರ್ಚಿಸಿ ತೀರ್ಮಾನ ಕೈಗೊಳ್ಳುವ ವಿಚಾರ (ಅಂದಾಜು ವೆಚ್ಚ ರೂ.80,000/–)

**ತೀರ್ಮಾನ:41(8):–** ವಿಷಯ ಸಂಖ್ಯೆ:22ರ ತೀರ್ಮಾನದಂತೆ ಕ್ರಮ ವಹಿಸಬಹುದೆಂದು ಒಪ್ಪಲಾಯಿತು.

**ವಿಷಯ:41(9):–** ಉದಯಗಿರಿ 6ನೇ ಅಡ್ಡ ರಸ್ತೆಯಲ್ಲಿರುವ ಖಾತಾ ನಂಬರ್:ಡಿ6/223/3394/48ರ ಬಾಬ್ತು ಶ್ರೀ.ಕೆಂಪೇಗೌಡರವರ ನಿವೇಶನದ ಎರಡು ಕಡೆ ಸಂಪರ್ಕ ರಸ್ತೆ ಕಲ್ಪಿಸುವ ಬಗ್ಗೆ ಪರಿಹಾರ ನೀಡುವ ಬಗ್ಗೆ ಚರ್ಚಿಸಿ ತೀರ್ಮಾನ ಕೈಗೊಳ್ಳುವ ವಿಚಾರ.

**ತೀರ್ಮಾನ:41(9):–** ಸ್ಥಾಯಿ ಸಮಿತಿ ಸಭೆಗೆ ತರುವುದೆಂದು ಸಭೆಯು ಸರ್ವಾನುಮತದಿಂದ ತೀರ್ಮಾನಿಸಲಾಯಿತು.

**ವಿಷಯ:41(10):** ವಾರ್ಡ್ ನಂಬರ್:24ರ ತಮಿಳು ಕಾಲೋನಿ 1 ರಿಂದ 6ನೇ ಅಡ್ಡ ರಸ್ತೆಗಳಲ್ಲಿ ಚರಂಡಿ ದುರಸ್ತಿ ಹಾಗೂ ಆರ್.ಸಿ.ಸಿ.ಡೆಕ್ ನಿರ್ಮಾಣ ಮಾಡಿಸಿಕೊಡಬೇಕೆಂದು ಉಪಾಧ್ಯಕ್ಷರಾದ ಶ್ರೀ.ಎಸ್.ರಮೇಶ್‌ರವರಿಂದ ಬಂದಿರುವ ವಿಷಯದ ಬಗ್ಗೆ ಚರ್ಚಿಸಿ ತೀರ್ಮಾನ ಕೈಗೊಳ್ಳುವ ವಿಚಾರ.(ಅಂದಾಜು ವೆಚ್ಚ ರೂ.1.10ಲಕ್ಷ).

**ತೀರ್ಮಾನ:41(10):–** ವಿಷಯ ಸಂಖ್ಯೆ:22ರ ತೀರ್ಮಾನದಂತೆ ಕ್ರಮ ವಹಿಸಬಹುದೆಂದು ಒಪ್ಪಲಾಯಿತು.

**ವಿಷಯ:41(11):–** ದಿನಾಂಕ:14–7–208ರಂದು ನಡೆದ ನಗರಸಬೆ ಅಂಗಡಿ ಮಳಿಗೆಗಳು, 10ನೇ ಹಣಕಾಸು ಯೋಜನೆ ಯಡಿ ಮತ್ತು ಐ.ಡಿ.ಎಸ್.ಎಂ.ಟಿ.ಯಡಿ ನಿರ್ಮಿಸಿರುವ ವಾಣಿಜ್ಯ ಮಳಿಗೆಗಳನ್ನು ಬಹಿರಂಗವಾಗಿ ಹರಾಜು ಮಾಡ ಲಾಗಿದ್ದು ಸದರಿ ಹರಾಜನ್ನು ಸ್ಥಿರೀಕರಿಸುವ ಬಗ್ಗೆ ಒಪ್ಪುವ ವಿಚಾರ

**ತೀರ್ಮಾನ:41(11):**–ಸದರಿ ಹರಾಜನ್ನು ಸ್ಥಿರೀಕರಿಸಬಹುದೆಂದು ಸಭೆಯಲ್ಲಿ ಸರ್ವಾನುಮತದಿಂದ ಒಪ್ಪಲಾಯಿತು.

**ವಿಷಯ:41(12):–** 2008–09ನೇ ಸಾಲಿನ ಜನರಲ್ ಮಾರ್ಕೆಟ್ ಖಾಸಗಿ ಬಸ್ ನಿಲ್ದಾಣ, ಸ್ಲಾಟರ್ ಹೌಸ್, ಟ್ಯಾಕ್ಸಿ ನಿಲ್ದಾಣ ಮತ್ತು ಸಂತೆ ಮೈದಾನದ ಸುಂಕ ವಸೂಲಾತಿಗಳನ್ನು ಬಹಿರಂಗ ಹರಾಜು ಮಾಡಲಾಗಿದ್ದು ಸದರಿ ಹರಾಜನ್ನು ಸ್ಥಿರೀಕರಿಸುವ ವಿಚಾರ.

**ತೀರ್ಮಾನ:41(12):–** ಮಾನ್ಯ ಶಾಸಕರ ಸೂಚನೆಯಂತೆ ಹರಾಜನ್ನು ಸ್ಥಿರೀಕರಿಸಬಹುದೆಂದು ಸಭೆಯಲ್ಲಿ ಸರ್ವಾನುಮತದಿಂದ ಒಪ್ಪಲಾಯಿತು.

**ವಿಷಯ:41(13):–** ವಾರ್ಡ್ ನಂಬರ್:21, ಹಾಲಹಳ್ಳಿ–ಹೊಸಹಳ್ಳಿಗೆ ಸಂಪರ್ಕ ಕಲ್ಪಿಸುವ 3ನೇ ಅಡ್ಡ ರಸ್ತೆಯಲ್ಲಿರುವ 3ಸಂಖ್ಯೆ ಒಳಚರಂಡಿ ಮ್ಯಾನ್‌ಹೋಲ್ ಚೇಂಬರ್‌ಗಳು ಒಡೆದುಹೋಗಿದ್ದು ಹಾಗೂ ಪೈಪ್ ಲೈನ್ ಅಳವಡಿಸುವುದರ ಬಗ್ಗೆ ಸದಸ್ಯರಾದ ಶ್ರೀಮತಿ:ಕೆ.ಎಲ್.ಶಾರದಮ್ಮ ರವರಿಂದ ಬಂದಿರುವ ವಿಷಯವನ್ನು ಒಪ್ಪಿ ಅನುಮೋದಿಸುವ ವಿಚಾರ.

**ತೀರ್ಮಾನ:41(13):–** ವಿಷಯ ಸಂಖ್ಯೆ:22ರ ತೀರ್ಮಾನದಂತೆ ಕ್ರಮ ವಹಿಸಬಹುದೆಂದು ಒಪ್ಪಲಾಯಿತು.

**ವಿಷಯ:41(14):–** ಸದಸ್ಯರಾದ ಶ್ರೀ.ಟಿ.ಎನ್.ಶಂಕರೇಗೌಡರವರಿಂದ ಬಂದಿರುವ ವಿಷಯ. ವಾರ್ಡ್ ನಂಬರ್:27ರಲ್ಲಿ ತಾವರೆಗೆರೆ 4ನೇ ಅಡ್ಡ ರಸ್ತೆ ಯತ್ತಗದಹಳ್ಳಿ ರಸ್ತೆಗೆ ಸೇರುವ ಜಾಗದಲ್ಲಿ 12ನೇ ಹಣಕಾಸು ಯೋಜನೆಯಡಿ ಕಾಮಗಾರಿ ನಡೆಯುತ್ತಿರುವುದರಿಂದ ಆ ಜಾಗದಲ್ಲಿ ಚರಂಡಿ ಹೂತು ಹೋಗಿದ್ದು ನೀರು ಸರಾಗವಾಗಿ ಹರಿದು ಹೋಗಲು ಚರಂಡಿಯನ್ನು ದುರಸ್ತಿಗೊಳಿಸಿ ಡೆಕ್ ಸ್ಲ್ಯಾಬ್ ನಿರ್ಮಿಸುವ ಬಗ್ಗೆ ಚರ್ಚಿಸಿ ತೀರ್ಮಾನ ಕೈಗೊಳ್ಳುವ ವಿಚಾರ.

**ತೀರ್ಮಾನ:41(14):–** ವಿಷಯ ಸಂಖ್ಯೆ:22ರ ತೀರ್ಮಾನದಂತೆ ಕ್ರಮ ವಹಿಸಬಹುದೆಂದು ಒಪ್ಪಲಾಯಿತು.

**ವಿಷಯ:41(15):–** ವಾರ್ಡ್ ನಂಬರ್:28ರ 1ನೇ ಅಡ್ಡ ರಸ್ತೆಯಲ್ಲಿ ಶ್ರೀ.ಗಿರೀಗೌಡರವರ ಡಿಪೋ ಹತ್ತಿರ ಎರಡು ರಸ್ತೆಗಳು ಸೇರುವ ಜಾಗವಾಗಿದ್ದು ಅಪಘಾತಗಳು ಆಗುವ ಸಂಭವವಿರುವುದರಿಂದ ಸದರಿ ಜಾಗದಲ್ಲಿ ಆರ್.ಸಿ.ಸಿ.ಡೆಕ್ ಮಾಡಿಸುವ ಬಗ್ಗೆ ಅಂದಾಜು ವೆಚ್ಚ ರೂ.50000/–ಗಳಿಗೆ ಒಪ್ಪಿ ಅನುಮೋದನೆ ನೀಡುವ ವಿಚಾರ.

**ತೀರ್ಮಾನ:41(15):–** ವಿಷಯ ಸಂಖ್ಯೆ:22ರ ತೀರ್ಮಾನದಂತೆ ಕ್ರಮ ವಹಿಸಬಹುದೆಂದು ಒಪ್ಪಲಾಯಿತು.

**ವಿಷಯ:41(16):–** ಸದಸ್ಯರಾದ ಶ್ರೀ.ಎಸ್.ಕೆ.ಶಿವಪ್ರಕಾಶ್ ಬಾಬುರವರು ಮನವಿ ಸಲ್ಲಿಸಿ ಮಂಡ್ಯ ನಗರದ ಮಹಾವೀರ ವೃತ್ತದಿಂದ ಹೊಸಹಳ್ಳಿ ಸರ್ಕಲ್‌ವರೆಗೆ ವೈಟ್ ಮೆಟಲ್ ಅಲಾಯಿಡ್ ಬೀದಿ ದೀಪಗಳನ್ನು ಖರೀದಿಸಿ ಅಳವಡಿಸಿಕೊಡಬೇಕೆಂದು ಕೋರಿರುವ ಬಗ್ಗೆ ತೀರ್ಮಾನ ಕೈಗೊಳ್ಳುವ ವಿಚಾರ.

**ತೀರ್ಮಾನ:41(16):–** ವಿಷಯ ಸಂಖ್ಯೆ:22ರ ತೀರ್ಮಾನದಂತೆ ಕ್ರಮ ವಹಿಸಬಹುದೆಂದು ಒಪ್ಪಲಾಯಿತು.

**ವಿಷಯ:41(17):–** ಮಂಡ್ಯ ನಗರಸಭೆ ವ್ಯಾಪ್ತಿಯಲ್ಲಿ ವಿವಿಧ ವಾರ್ಡ್‌ಗಳಲ್ಲಿ ಕಾಮಗಾರಿಗಳನ್ನು ನಿರ್ವಹಿಸಲು ಟೆಂಡರ್ ಕರೆಯಲಾಗಿದ್ದು ಬಂದಿರುವ ಟೆಂಡರ್ ದರಗಳ ತುಲನಾತ್ಮಕ ಪಟ್ಟಿಯನ್ನು ಪರಿಶೀಲಿಸಿ ಒಪ್ಪಿ ಅನುಮೋದಿಸುವ ವಿಚಾರ

**ತೀರ್ಮಾನ:41(17):–** ವಾರ್ಡ್ ನಂಬರ್:18ಎಂಬುದನ್ನು ಬದಲಾವಣೆ ಮಾಡಿಕೊಂಡು ಅತ್ಯಂತ ಕಡಿಮೆ ದರದ ಟೆಂಡರ್‌ನ್ನು ಸಭೆಯಲ್ಲಿ ಸರ್ವಾನುಮತದಿಂದ ಒಪ್ಪಿ ಅನುಮೋದಿಸಲಾಯಿತು.

**ನಗರಸಭಾ ಕಾರ್ಯಾಲಯ, ಮಂಡ್ಯ.**

ನೋಟಿಫಿಕೇಷನ್ ನಂ.ನಸಮಂ/ತಾಂತ್ರಿಕ ಶಾಖೆ/ವಿನಿ/ಸಿಆರ್/184/2007–08 ದಿನಾಂಕ:7–2–2008.

**ತುಲನಾತ್ಮಕ ಪಟ್ಟಿ.**

| ಕ್ರ.ಸಂ. | ಕಾಮಗಾರಿ ಹೆಸರು | ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ) | ಗುತ್ತಿಗೆದಾರರ ಹೆಸರು | ನಮೂದಿಸಿರುವ ದರ | ಷರಾ |
|---|---|---|---|---|---|
| 1 | ವಾರ್ಡ್‌ನಂ.25ರ ಉದಯಗಿರಿ ಸ್ಮಶಾನವನ್ನು ಅಭಿವೃದ್ಧಿಪಡಿಸುವುದು. | 7.75 | ಎಂ.ಎಸ್.ಚಂದ್ರಶೇಖರ್ | 16.15% Above | |
| | | | ಹೆಚ್.ಎಸ್.ಅರುಣಕುಮಾರ್ | 24.04% Above | |
| 2 | ವಾರ್ಡ್ ನಂ:25ರ ಬೋವಿ ಕಾಲೋನಿಯ ಎಡಭಾಗದಲ್ಲಿ (ಮುಖ್ಯ ರಸ್ತೆಯಲ್ಲಿ) ಆರ್.ಸಿ.ಸಿ. ಚರಂಡಿ ನಿರ್ಮಾಣ ಕಾಮಗಾರಿ. | 9.95 | ಎಂ.ವೆಂಕಟೇಶ್ | 3.22% ¨Below | |
| | | | ಎಂ.ಎ.ಬ್ರಹ್ಮದೇವ್ | 13.92% Above | |
| | | | ಸಿ.ಬಿ.ಪುಟ್ಟಸ್ವಾಮಿ | 11.74 %Above | |
| 3 | ವಾರ್ಡ್ ನಂ.12ರಲ್ಲಿ ಗಾಂಧಿನಗರ ಪೌರಾಯುಕ್ತರ ವಸತಿ ಗೃಹದ ರಸ್ತೆಯ ಎಡಭಾಗದಲ್ಲಿ ಬಾಕ್ಸ್ ಚರಂಡಿ ನಿರ್ಮಾಣ. | 3.55 | ವೆಂಕಟಪ್ಪ | S.R.Rate | |
| | | | ಎಂ.ಎಸ್.ಚಿದಂಬರ್ | S.R.Rate | |
| | | | ವೈ.ಡಿ.ರಾಮು | S.R.Rate | |
| | | | ಎಂ.ಎ.ಬ್ರಹ್ಮದೇವ್ | S.R.Rate | |
| | | | ಹೆಚ್.ಎಸ್.ಅರುಣ್‌ಕುಮಾರ್ | 5% Below | |
| 4 | ವಾರ್ಡ್‌ನಂ.18ರ ಬುದ್ಧ ಮಾರ್ಗ ರಸ್ತೆಯಲ್ಲಿ ಮೆಟಲಿಂಗ್ ಮಾಡಿ ಡಾಂಬರೀಕರಣ ಮಾಡುವುದು ಮತ್ತು ಚರಂಡಿ ನಿರ್ಮಾಣ. | 3.11 | ಹೆಚ್.ವಿ.ನಟರಾಜು | S.R.Rate | |
| | | | ಎಂ.ಬಿ.ರಾಜಪ್ಪ | S.R.Rate | |
| | | | ವಿ.ಎನ್.ಶ್ರೀನಿವಾಸ್ | 5.50% Below | |
| 5 | ಹೊಸಹಳ್ಳಿ ಡಾ:ಬಿ.ಆರ್. ಅಂಬೇಡ್ಕರ್ ಭವನ ಮತ್ತು ಶಂಭುಲಿಂಗೇಶ್ವರ ದೇವಸ್ಥಾನ ದುರಸ್ತಿಗೊಳಿಸುವುದು (ಶೇ.18ರ ನಿಧಿ | 1.50 | ವೈ..ಡಿ.ರಾಮು | S.R.Rate | |
| | | | ವಿ.ಎನ್.ಶ್ರೀನಿವಾಸ್ | 5.70% Below | |
| 6 | ವಿದ್ಯಾನಗರ ಡಾ:ಬಿ.ಆರ್. ಅಂಬೇಡ್ಕರ್ ಭವನ ದುರಸ್ತಿಗೊಳಿಸುವುದು (ಶೇ.18ರ ನಿಧಿ) | 0.65 | ವಿ.ಜಿ.ಲಿಂಗೇಗೌಡ | S.R.Rate | |
| | | | ಎನ್.ಪೆರುಮಾಳ್ | 0.50 Below | |
| | | | ಮಾಸ್ತಿಗೌಡ | S.R.Rate | |
| 7 | ವಾರ್ಡ್ ನಂ.13ರ ಶಂಕರನಗರ ಅಂಬುಜಮ್ಮರವರ ಮನೆ ಮುಂಭಾಗದ ಉದ್ಯಾನವನಕ್ಕೆ ಫೆನ್ಸಿಂಗ್ ಹಾಕುವುದು. | 3.60 | ವೈ.ಡಿ.ಹನುಮಂತಯ್ಯ | 6% Below | |
| | | | ಎಂ.ಎ.ಬ್ರಹ್ಮದೇವ್ | S.R.Rate (2007-08) | |
| | | | ಬಿ.ಕೆ.ಲಿಂಗರಾಜು | 2.80%Below | |
| | | | ಬಿ.ಕೆ.ಲಿಂಗೇಗೌಡ | S.R.Rate (2007-08) | |
| 8 | ವಾರ್ಡ್ ನಂ.9ರ ಗುಂಡುರಾವ್ ಉದ್ಯಾನವನಕ್ಕೆ ಫೆನ್ಸಿಂಗ್ ಹಾಕುವುದು | 4.95 | ವಿ.ಎನ್.ಶ್ರೀನಿವಾಸ್ | 7.70% Blow | |
| | | | ಬಿ.ಕೆ.ಲಿಂಗರಾಜು | 3% Below | |
| | | | ವಿ.ಡಿ.ನಾಗೇಶ್ | 1.75 Below | |
| | | | ಜಿ.ಸಿ.ರಾಜ್‌ಕುಮಾರ್ | 1% Below | |
| | | | ಎಂ.ಆರ್.ಸತೀಶ್ | S.R.Rate | |
| | | | ಎಂ.ಎ.ಬ್ರಹ್ಮದೇವ್ | S.R.Rate | |
| | | | ವೆಂಕಟಪ್ಪ | S.R.Rate | |

**ವಿಷಯ:41(18):–** ಸಹಾಯಕ ಕಾರ್ಯಪಾಲಕ ಅಭಿಯಂರರು, ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ, ನಿರ್ವಹಣಾ ಉಪ ವಿಭಾಗ, ಮಂಡ್ಯರವರ ಪತ್ರ ಸಂಖ್ಯೆ:ಕಜಮಂ/ಸಕಾಅ/ಮಂಡ್ಯ/ನಿಉವಿ/274/2008–09 ದಿನಾಂಕ:11–7–2008ರಂತೆ ಮಂಡ್ಯ ನಗರ ವ್ಯಾಪ್ತಿಯಲ್ಲಿ ಕೆಲವು ಮನೆಗಳಲ್ಲಿ ಎರಡು ಕೊಳಾಯಿ ಸಂಪರ್ಕ ಇರುವ ಪ್ರಕರಣಗಳ ಬಗ್ಗೆ ನಗರಸಭೆ ವ್ಯಾಪ್ತಿಯಲ್ಲಿ ಈ ವರೆವಿಗೆ ಸುಮಾರು 500ಕ್ಕೂ ಹೆಚ್ಚು ಇರುವುದಾಗಿ ನಮ್ಮ ಗಮನಕ್ಕೆ ಬಂದಿರುತ್ತದೆ. ಇಂತಹ ಗ್ರಾಹಕರು ತಾವು ಹೆಚ್ಚುವರಿ ಸಂಪರ್ಕ ಪಡೆದಿಲ್ಲವೆಂದು ಈ ಹಣವನ್ನು ಮಂಡಳಿಗೆ ಪಾವತಿಸುವ ಪ್ರಶ್ನೆಯೇ ಇರುವುದಿಲ್ಲವೆಂದು ತಿಳಿಸಿರುತ್ತಾರೆ. ಆದ್ದರಿಂದ ಈ ಸಮಸ್ಯೆ ಬಗ್ಗೆ ಹೊಂದಾಣಿಕೆ ಮಾಡುಕೊಡುವ ಬಗ್ಗೆ ಹಾಗೂ ಈ ವಿಚಾರದಲ್ಲಿ ಆಡಿಟ್ ಆಕ್ಷೇಪಣೆಯಾಗುವ ಸಾಧ್ಯತೆ ಇರುವುದರಿಂದ ನಮ್ಮ ಮಂಡಳಿ ವ್ಯಾಪ್ತಿಯಲ್ಲಿ ನಿರ್ಣಯ ತೆಗೆದುಕೊಳ್ಳಲು ಕಾನೂನಿನನ್ವಯ ಸೂಕ್ತವಾಗಿರುವುದಿಲ್ಲವಾದ್ದರಿಂದ ಇಂತಹ ಪ್ರಕರಣಗಳ ಬಗ್ಗೆ ನಗರಸಭೆ ನಿರ್ಣಯ ಕೈಗೊಂಡು ಗ್ರಾಹಕರಿಗೆ ನ್ಯಾಯ ಒದಗಿಸಿಕೊಡಬೇಕೆಂದು ಕೋರಿರುತ್ತಾರೆ. ಆದ್ದರಿಂದ ಸದರಿ ವಿಷಯದ ಬಗ್ಗೆ ಚರ್ಚಿಸಿ ತೀರ್ಮಾನ ಕೈಗೊಳ್ಳುವ ವಿಚಾರ.

**ತೀರ್ಮಾನ:41(18):–** ಸಭೆಯಲ್ಲಿ ಕೂಲಂಕುಷವಾಗಿ ಚರ್ಚಿಸಿ ಈ ಬಗ್ಗೆ ನಗರಸಭೆ ಅಧಿಕಾರಿಗಳು ಮತ್ತು ಸಿಬ್ಬಂದಿ ಹಾಗೂ ಜಲ ಮಂಡಳಿ ಅಧಿಕಾರಿಗಳು ವಾರ್ಡ್ ಸದಸ್ಯರುಗಳ ಸಹಕಾರದೊಂದಿಗೆ ಜೊತೆಯಾಗಿ ಸ್ಥಳ ಪರಿಶೀಲಿಸಿ ಮುಂದಿನ ಕ್ರಮ ಕೈಗೊಳ್ಳುವುದೆಂದು ತೀರ್ಮಾನಿಸಲಾಯಿತು.

**ವಿಷಯ:41(19):–** ಮಂಡ್ಯ ನಗರ ಘನತ್ಯಾಜ್ಯ ವಸ್ತು ವಿಲೇವಾರಿ ನಿವೇಶನದಲ್ಲಿ ಅಭಿವೃದ್ಧಿ ಕಾಮಗಾರಿ ನಿರ್ವಹಿಸಲು ಹೆಚ್ಚುವರಿ ಪರಿಷ್ಕೃತ ಕ್ರಿಯಾ ಯೋಜನೆ ಮಂಜೂರುಮಾಡುವ ಬಗ್ಗೆ.

Funds requirements for Improvements of Land fill site.

| | | |
|---|---|---|
| 1) | Drains | Rs. 100.00Lakhs |
| 2) | Pits with lining - 10 Nos. - | Rs. 65.00Lakhs |
| 3) | Pipe line - | Rs. 15.00Lakhs |
| 4) | Plantation. - | Rs. 10.00Lakhs |
| 5) | Roads - | Rs. 10.00Lakhs |
| 6) | Lighting - | Rs. 10.00Lakhs |
| 7) | Compound Wall - | Rs. 5.00Lakhs |
| 8) | Borewell -3 Nos with service Charges -Escom- | Rs. 5.00Lakhs |
| 9) | Watchmen Shed - | Rs. 2.5Lakhs |
| 10) | Lichet Pits | Rs. 2.5 Lakhs |
| 11) | Compound wall, Roads, C.D.,Drain works. | Rs.43.60Lakhs |
| | Total | Rs.268.60Lakhs |

**ತೀರ್ಮಾನ:41(19):–** ಮುಂದಿನ ಸಭೆಗೆ ವಿಷಯವನ್ನು ತಂದು ತೀರ್ಮಾನ ಕೈಗೊಳ್ಳುವುದೆಂದು ಸರ್ವಾನುಮತದಿಂದ ತೀರ್ಮಾನಿಸಲಾಯಿತು.

**ವಿಷಯ:41(20):–** ಮಂಡ್ಯ ಕ್ಷೇತ್ರದ ಮಾನ್ಯ ಶಾಸಕರ ಸೂಚನೆ ಮೇರೆಗೆ ಮಂಡ್ಯ ನಗರ ವ್ಯಾಪ್ತಿಯಲ್ಲಿ ಕಲ್ಲಹಳ್ಳಿ ರೈಲ್ವೆ ಗೇಟ್‌ನಿಂದ ಪುನೀತ್ ಹೋಟೆಲ್‌ವರೆಗೆ (ರೈಲ್ವೆ ಲೈನ್ ಪಕ್ಕ) ಸಿಲ್ಟ್ ತೆಗೆಸುವುದು ಅಂದಾಜು ಮೊತ್ತ ರೂ. 1.00ಲಕ್ಷ ಗಳಿಗೆ ಅನುಮೋದನೆ ನೀಡುವ ವಿಚಾರ.

**ತೀರ್ಮಾನ:41(20):–** ಸರ್ವಾನುಮತದಿಂದ ಒಪ್ಪಲಾಯಿತು.

**ವಿಷಯ:41(21):–** ಮಂಡ್ಯ ನಗರ ವಿ.ವಿ.ನಗರ, 8ನೇ ಕ್ರಾಸ್, ಲ್ಯಾಂಡ್ ಆರ್ಮಿ ಕೊಳಚೆ ಪ್ರದೇಶದಿಂದ ಸೋಮೇಶರ ಸಮುದಾಯ ಭವನದವರೆಗೆ ಇರುವ ದೊಡ್ಡ ಮೋರಿಯಲ್ಲಿ ಸಿಲ್ಟ್ ತೆಗೆಸುವುದು ಅಂದಾಜು ಮೊತ್ತ ರೂ.1.00ಲಕ್ಷಗಳಿಗೆ ಅನುಮೋದನೆ ನೀಡುವ ವಿಚಾರ

**ತೀರ್ಮಾನ:41(21):–** ಈಗ ಮಳೆಗಾಲ ಪ್ರಾರಂಭವಾಗಿರುವುದರಿಂದ ಎಂ.ಸಿ.ರಸ್ತೆಯಿಂದ ರೈಲ್ವೆಗೇಟ್‌ವರೆಗೂ ಸೇರಿಸಿ ಮಾಡಿಸಬಹುದೆಂದು ಸರ್ವಾನುಮತದಿಂದ ತೀರ್ಮಾನಿಸಲಾಯಿತು.

**ವಿಷಯ:41(22):–** 18ನೇ ವಾರ್ಡ್ ಸದಸ್ಯರಿಂದ ಬಂದಿರುವ ಮನವಿ ಮೇರೆಗೆ (ಎ) ಗುರುಮಠ ರಸ್ತೆ ಯು.ಜಿ.ಡಿ.ಲೈನ್ ದುರಸ್ತೆ ಅಂದಾಜು ಮೊತ್ತ 1.00ಲಕ್ಷಗಳು , (ಬಿ) ಗಾಂಧಿನಗರ 8 ಮತ್ತು 9ನೇ ಕ್ರಾಸ್ ರಸ್ತೆಗಳಲ್ಲಿ ಯು.ಜಿ.ಡಿ.ಲೈನ್ ದುರಸ್ತಿ ಅಂದಾಜು ಮೊತ್ತ ರೂ.1.00ಲಕ್ಷ ಗಳಿಗೆ ಅನುಮೋದನೆ ನೀಡುವ ವಿಚಾರ.

**ತೀರ್ಮಾನ:41(22):–** 16ನೇ ವಾರ್ಡ್ ಗುರುಮಠ ರಸ್ತೆ ಎಂದು ಸರಿಪಡಿಸಿಕೊಂಡು ತುರ್ತಾಗಿ ಕಾಮಗಾರಿ ಮಾಡಿಸಬಹುದೆಂದು ಒಪ್ಪಲಾಯಿತು.

**ವಿಷಯ: 41(23):–** 3ನೇ ವಾರ್ಡ್ ಸದಸ್ಯರಾದ ಶ್ರೀ.ನಂಜುಂಡಪ್ಪರವರ ಕೋರಿಕೆ ಮೇರೆಗೆ ಡಿ.ಸಿ.ಸಿ. ಬ್ಯಾಂಕ್ ಹಿಂಬಾಗದ ಅಡ್ಡ ರಸ್ತೆಗಳ ಅಭಿವೃದ್ಧಿ ಕಾಮಗಾರಿ ಅಂದಾಜು ಮೊತ್ತ ರೂ.1.00ಲಕ್ಷ ಗಳಿಗೆ ಅನುಮೋದನೆ ನೀಡುವ ವಿಚಾರ.

**ತೀರ್ಮಾನ:41(23):–** ವಿಷಯ ಸಂಖ್ಯೆ:22ರ ತೀರ್ಮಾನದಂತೆ ಕ್ರಮ ವಹಿಸಬಹುದೆಂದು ಒಪ್ಪಲಾಯಿತು.

**ವಿಷಯ:41(24):–** ನಗರಸಭೆ ಪರಿಸರ ಅಭಿಯಂತರರ ವಸತಿ ಗೃಹಕ್ಕೆ ವಿದ್ಯುತ್ ಸಂಪರ್ಕ ವ್ಯವಸ್ಥೆ ಬಾಬ್ತು ಅಂದಾಜು ಮೊತ್ತ 35,000/–ಗಳಿಗೆ ಅನುಮೋದನೆ ನೀಡುವ ವಿಚಾರ.

**ತೀರ್ಮಾನ:41(24):–** ಸರ್ವಾನುಮತದಿಂದ ಒಪ್ಪಲಾಯಿತು.

**ವಿಷಯ:41(25):–** ನಗರಸಭೆ ವಾಹನ ಸಂಖ್ಯೆ:ಕೆ.ಎ.11/2793 ಟ್ರ್ಯಾಕ್ಟರ್ ದುರಸ್ತಿ ಮಾಡಿಸುವ ಅಂದಾಜು ಮೊತ್ತ ರೂ.70,330/–ಗಳಿಗೆ ಅನುಮೋದನೆ ನೀಡುವ ವಿಚಾರ.

**ತೀರ್ಮಾನ:41(25):–** ದುರಸ್ತಿ ಮಾಡಿಸಲು ಸರ್ವಾನುಮತದಿಂದ ಒಪ್ಪಲಾಯಿತು.

**ವಿಷಯ:41(26):–** ಗುತ್ತಲು ಗ್ರಾಮ ಪಂಚಾಯ್ತಿ 1972ನೇ ಇಸವಿಯಿಂದ ಮಂಡ್ಯ ನಗರಸಭೆ ವ್ಯಾಪ್ತಿಗೆ ಸೇರ್ಪಡೆಗೊಂಡಿದ್ದು ಸದರಿ ಗ್ರಾಮ ಪಂಚಾಯ್ತಿ ಪ್ರದೇಶದ ಆಸ್ತಿಗಳಿಗೆ ಸಂಬಂಧಿಸಿದಂತೆ ಕಂದಾಯ ನಿರ್ಧರಣಾಧಿಕಾರಿಗಳು ಮನೆ ಮತ್ತು ಶೆಡ್ಡು ಎಂದು ನಮೂದಿಸಿರುತ್ತಾರೆ. ಆದರೆ ಆಸ್ತಿಯ ಒಟ್ಟು ಅಳತೆಗಳನ್ನು ನಗರಸಭೆ ಆಸ್ತಿ ದಾಖಲಾತಿಗಳಲ್ಲಿ ನಮೂದಿಸಿರುವುದಿಲ್ಲವಾದ್ದರಿಂದ ಆಸ್ತಿಗಳ ಪೂರ್ಣ ಅಳತೆ ದಾಖಲು ಮಾಡಿಕೊಡುವಂತೆ ಕೋರಿ. ಶ್ರೀ.ಕೆ.ಎಸ್.ಕುಮಾರ್, ನಗರಸಭಾ ಸದಸ್ಯರು ಸಲ್ಲಿಸಿರುವ ಮನವಿ ಬಗ್ಗೆ ತೀರ್ಮಾನ ಕೈಗೊಳ್ಳುವ ವಿಚಾರ.

**ತೀರ್ಮಾನ:41(26):–** ಶ್ರೀ.ಹೆಚ್.ಸಿ.ಬೋರೇಗೌಡರವರು ದೇವೇಗೌಡನದೊಡ್ಡಿ, ಗುತ್ತಲು ಕಾಲೋನಿ, ಹೊಸಹಳ್ಳಿ, ಹಾಲಹಳ್ಳಿ, ಕಲ್ಲಹಳ್ಳಿ, ತಾವರೆಗೆರೆ ಹಾಗೂ ಬಹಳ ವರ್ಷಗಳ ಹಿಂದೆ ನಗರಸಭೆ ವ್ಯಾಪ್ತಿಗೆ ಸೇರ್ಪಡೆಯಾಗಿರುವ ಇನ್ನಿತರೆ ಗ್ರಾಮ ಠಾಣ ಪ್ರದೇಶಗಳನ್ನು ಸದರಿ ಪ್ರದೇಶದಲ್ಲಿರುವ ನಿವೇಶನಗಳ ಪೂರ್ಣ ಅಳತೆ ಕಛೇರಿ ದಾಖಲಾತಿಗಳಲ್ಲಿ ಲಭ್ಯವಿಲ್ಲದೆ ತೊಂದರೆಯಾಗುತ್ತಿರುವುದರಿಂದ ಆಸ್ತಿ ಮಾಲೀಕರುಗಳಿಗೆ ನೋಟೀಸ್ ನೀಡಿ ಅವರಲ್ಲಿರುವ ಮೂಲ ದಾಖಲಾತಿಗಳನ್ನು ಪಡೆದು ಪರಿಶೀಲಿಸಿ ನಿಯಮಾನುಸಾರ ಅಳತೆ ಮಾಡಿಸಿ ಪೂರ್ಣ ಅಳತೆಗಳನ್ನು ದಾಖಲಿಸಲು ಕ್ರಮ ವಹಿಸುವ ಬಗ್ಗೆ ನಿರ್ಣಯ ಕೈಗೊಳ್ಳುವಂತೆ ಸೂಚಿಸಿದರು. ಶ್ರೀ.ಹೆಚ್.ಸಿ.ಬೋರೇಗೌಡರವರ ಸೂಚನೆಯನ್ನು ಶ್ರೀ.ಕೆ.ಎಲ್.ನಾಗೇಂದ್ರರವರು, ಎಂ.ಎಲ್.ಮಂಜುನಾಥ್‌ರವರು ಮತ್ತು ಶ್ರೀ.ಟಿ.ಎನ್.ಶಂಕರೇಗೌಡರವರು ಅನುಮೋದಿಸಿದರು. ಸದಸ್ಯರುಗಳು ಸೂಚನೆ ಮತ್ತು ಅನುಮೋದನೆ ಯನ್ನು ಸಭೆಯು ಒಪ್ಪಲಾಯಿತು.

**ವಿಷಯ:41(27):-** 21ನೇ ವಾರ್ಡ್ ಸದಸ್ಯರಾದ ಶ್ರೀಮತಿ:ಕೆ.ಎಲ್.ಶಾರದಮ್ಮರವರು ಹೊಸಹಳ್ಳಿ ಪರಿಶಿಷ್ಟ ಜಾತಿ ಕಾಲೋನಿಯಲ್ಲಿರುವ ಅಂಗನವಾಡಿ ಕೇಂದ್ರ ಕಟ್ಟಡಕ್ಕೆ ಬಿಟ್ಟಿರುವ ನಗರಸಭೆ ಜಾಗವನ್ನು ಅಂಗನವಾಡಿ ಕೇಂದ್ರ ಕಟ್ಟಡ ಕಟ್ಟಲು ಕೋರಿರುವ ಬಗ್ಗೆ ಪರಿಶೀಲಿಸಿ ತೀರ್ಮಾನ ಕೈಗೊಳ್ಳುವ ವಿಚಾರ.

**ತೀರ್ಮಾನ: 41(27):-** ಹೊಸಹಳ್ಳಿ ಪರಿಶಿಷ್ಟ ಜಾತಿ ಕಾಲೋನಿಯಲ್ಲಿರುವ ನಗರಸಭೆ ಜಾಗದಲ್ಲಿ ಅಂಗನವಾಡಿ ಕೇಂದ್ರ ಕಟ್ಟಡ ನಿರ್ಮಾಣಕ್ಕಾಗಿ ಜಾಗವನ್ನು ಕೊಡಬಹುದೆಂದು ಸಭೆಯು ಸರ್ವಾನುಮತದಿಂದ ಒಪ್ಪಲಾಯಿತು.

**ವಿಷಯ:41(28):-** ವಾರ್ಡ್ ನಂಬರ್:35ರ ಸದಸ್ಯರಾದ ಶ್ರೀ.ಶಂಕರೇಗೌಡರವರು ಷುಗರ್ ಟೌನ್ ಬಡಾವಣೆ ನೀರಿನ ಕೊರತೆ ಇರುವುದರಿಂದ ಕರ್ನಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯವರು , ಮಂಡ್ಯರವರಿಂದ ಕಾವೇರಿ ನೀರನ್ನು ಒದಗಿಸುವಂತೆ ಕೋರಿರುವ ವಿಚಾರ.

**ತೀರ್ಮಾನ:41(28):-** ಮಾನ್ಯ ಸದಸ್ಯರ ಮನವಿಯಂತೆ ಕಾವೇರಿ ನೀರು ಸೌಕರ್ಯ ಕಲ್ಪಿಸಲು ಕ್ರಮ ವಹಿಸುವಂತೆ ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಗೆ ಪತ್ರ ಬರೆಯುವುದೆಂದು ತೀರ್ಮಾನಿಸಲಾಯಿತು.

**ವಿಷಯ:41(29):-** ಮಂಡ್ಯ ನಗರ ವ್ಯಾಪ್ತಿಯಲ್ಲಿ ರಸ್ತೆಗಳಲ್ಲಿರುವ ಗುಂಡಿಗಳನ್ನು ಮುಚ್ಚುವಂತೆ ಮಾನ್ಯ ಶಾಸಕರು ಸಭೆಯಲ್ಲಿ ಸೂಚಿಸಿದರು. ಶಾಸಕರ ಸೂಚನೆಯಂತೆ ಎಲ್ಲಾ ಸದಸ್ಯರು ತುರ್ತಾಗಿ ಕಾಮಗಾರಿ ಕೈಗೊಳ್ಳುವಂತೆ ಕೋರಿದ್ದರ ಮೇರೆಗೆ ತೀರ್ಮಾನ ಕೈಗೊಳ್ಳುವ ವಿಚಾರ.

**ತೀರ್ಮಾನ:41(29):-** ತುರ್ತಾಗಿ ಕಾಮಗಾರಿ (ಗುಂಡಿ ಮುಚ್ಚುವ)ಯನ್ನು ಕೈಗೊಳ್ಳಲು ಸಭೆಯಲ್ಲಿ ಸರ್ವಾನು ಮತದಿಂದ ತೀರ್ಮಾನಿಸಲಾಯಿತು.

ಸಹಿ:
ಅಧ್ಯಕ್ಷರು,
ನಗರಸಭೆ, ಮಂಡ್ಯ.

"ನಕಲು"

ಪೌರಾಯುಕ್ತರು,
ನಗರಸಭೆ, ಮಂಡ್ಯ.